ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 2 ಜನವರಿ 11, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಜನತಾ ಪಕ್ಷದ ಸಂಕುಚಿತ ಧೋರಣೆ

ಸರ್ವಾಧಿಕಾರಿ ಶಕ್ತಿಯ ಬೆಳವಣಿಗೆಗೆ ಇಂಬು ಕೊಟ್ಟಿದೆ.

– ಸಿ. ಪಿ. ಐ. (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸೆಕ್ರೇಟಾರಿಯೇಟ್ ರಾಜ್ಯದಲ್ಲಿ ಪುನಃ ಸರ್ವಾಧಿಕಾರಿ ಶಕ್ತಿಗಳ ಬೆಳವಣಿಗೆಯ ಬಗ್ಗೆ ಆತಂಕ ವ್ಯಕ್ತ ಪಡಿಸುತ್ತದೆ. ಇದು ಜಿಲ್ಲಾ ಮಟ್ಟದಲ್ಲಿ ಆಡಳಿತೆಯ ಸೂತ್ರಗಳನ್ನು ವಹಿಸುವಷ್ಟು ಹತ್ತಿರ ಹತ್ತಿರಕ್ಕೆ ಕಾಂಗ್ರೆಸ್ [ಐ] ನ್ನು ತಂದ ಪರಿಷತ್ ಚುನಾವಣಾ ಫಲಿತಾಂಶಗಳ ಬಗ್ಗೆ ಸಿ.ಪಿ.ಐ. [ಎಂ] ನ ದೃಷ್ಟಿ ಕೋನ.

1983 ಮತ್ತು 1985ರ ವಿಧಾನ ಸಭಾ ಚುನಾವಣಾ ಫಲಿತಾಂಶಗಳಿಂದ ಕಾಂಗ್ರೆಸ್ [ಐ] ನ ಶಕ್ತಿ ಉಡುಗಿದೆ ಎಂದು ಊಹಿಸುವುದು ತಪ್ಪು ಎಂಬುದನ್ನು ಜನತಾ ಪಕ್ಷಕ್ಕೂ ಅದರ ಸರಕಾರಕ್ಕೂ ಮನದಟ್ಟು ಮಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಪದೇ ಪದೇ ಪ್ರಯತ್ನ ಮಾಡುತ್ತಲೇ ಬಂದಿದೆ. ರಾಜ್ಯದಲ್ಲಿ ತನ್ನ ನೆಲೆಯನ್ನು ಕಳೆದುಕೊಂಡ ಕಾರಣಕ್ಕಾಗಿ ಕಾಂಗ್ರೆಸ್ [ಐ] ಸೋತುದಲ್ಲ ಬದಲು. ಎರಡು ಕಾರಣಗಳಿಗಾಗಿ ಅದು ಸೋತಿತು.

ಒಂದು, ರಾಜ್ಯದಲ್ಲಿ ಕಾಂಗ್ರೆಸ್ ಅನುಸರಿಸುತ್ತಾ ಬಂದ ಜನತಾ ವಿರೋಧಿ ಧೋರಣೆಗಳ ವಿರುದ್ಧ ವಿರೋಧ ಪಕ್ಷಗಳು ಸಂಯುಕ್ತವಾಗಿ ಹೋರಾಟ ಮಾಡುತ್ತಾ ಬಂದುದು. ಎರಡು ತಮ್ಮ ನಿಜವಾದ ಬೇಡಿಕೆಗಳಿಗಾಗಿ ಚಳುವಳಿ ನಡೆಸುತ್ತಿದ್ದ 150ಕ್ಕೂ ಹೆಚ್ಚು ರೈತರು, ಕಾರ್ಮಿಕರು ಮತ್ತು ವಿದ್ಯಾರ್ಥಿಗಳನ್ನು ಬಂದೂಕಿನಿಂದಲೇ ಮಾತನಾಡಿಸುತ್ತಿದ್ದ ಗುಂಡೂರಾಯರ ಆಡಳಿತ ಕೊಂದುದು.

ಆದರೆ, ಇದನ್ನು ಜನತಾ ಪಕ್ಷ ಮತ್ತು ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರಕಾರವು ಮನಗಾಣಲು ನಿರಾಕರಿಸಿತು. ಪಕ್ಷದ ಮಟ್ಟದಲ್ಲಾಗಲಿ, ಸರ್ಕಾರದಲ್ಲಾಗಲೀ ಅವರ ನಡವಳಿಕೆ ಎಲ್ಲಾ ನಮ್ಮ ಸಾಧನೆಯೇ ಎಂಬಂತಿತ್ತು.

ಇದೇ ಸಮಯದಲ್ಲಿ 1983ರಲ್ಲಿ ಸರ್ವಾಧಿಕಾರಿ ವಿರೋಧಿಶಕ್ತಿಗಳ ಅಲೆಯಲ್ಲಿ ಅಧಿಕಾರ ಪಡೆದ ಜನತಾ ಪಕ್ಷವು, ಅಧಿಕಾರಕ್ಕೆ ಬಂದ ನಂತರ, ರಾಜ್ಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ರೂಪಿಸುವುದರಲ್ಲಾಗಲೀ ಕೇಂದ್ರ – ರಾಜ್ಯ ಸಂಬಂಧಗಳನ್ನು ಇನ್ನು ಹೆಚ್ಚಿನ ಸಮತೋಲನದ ದಿಕ್ಕಿನಲ್ಲಿ ಬೆಳೆಸುವುದಕ್ಕಾಗಲೀ, ಕೇಂದ್ರದಿಂದ ರಾಜ್ಯದ ಬೆಳವಣಿಗೆಗಳಿಗಾಗಿ ಅಧಿಕ ಹಣಗಳನ್ನು ಪಡೆಯುವುದಕ್ಕಾಗಲೀ ಯಾವುದೇ ಹೆಜ್ಜೆಗಳನ್ನಿಡಲು ನಿರಾಕರಿಸಿತು. "ಆಡಳಿತೆ ಮತ್ತು ಚಳುವಳಿ ಎರಡೂ ಜತೆ ಜತೆಯಲ್ಲಿ ಹೋಗಲು ಸಾಧ್ಯವಿಲ್ಲ" ಎಂಬುದು ಅವರ ನೆಪ. ಬದಲಾಗಿ, ಹಿಂದೆ ಕಾಂಗ್ರೆಸ್ಸು (ಐ) ಸರಕಾರವು ಮಾಡುತ್ತಾ ಬಂದಂತೆ, ಜನತಾ ಪಕ್ಷ ಮತ್ತವರ ಸರಕಾರವು 'ಭ್ರಮೆ ಹುಟ್ಟಿಸುವ' ಅಗ್ಗದ ಕ್ರಮಗಳನ್ನು ಅನುಸರಿಸಿ ಜನತೆಯನ್ನು ಒಲಿಸಲು ಆರಂಭಿಸಿತು – ಆ ಮೂಲಕ ವಿಸ್ತೃತ ನೆಲೆಯಲ್ಲಿ ಜನತಾ ಚಳವಳಿಗಳನ್ನು ಸಂಘಟಿಸುವ ಸಾಧ್ಯತೆಗಳನ್ನು ಕಡೆಗಣಿಸಿತು. ಜನತೆಯ ತುರ್ತಿನ ಮತ್ತು ಮೂಲ ಸಮಸ್ಯೆಗಳಿಗಾಗಿ ಚಳುವಳಿ ಎಡ ಪಕ್ಷಗಳು ಮೇಲೆ ಮಾತ್ರ ಬಿದ್ದ ಜವಾಬ್ದಾರಿಯಾಯಿತು.

ಕುಲಕ್ ಮತ್ತು ಭೂ ಮಾಲಕ ಶಕ್ತಿಗಳು ಅಧಿಕಾರಕ್ಕಾಗಿ ಕಚ್ಚಾಟ ಮಾಡುವುದಕ್ಕಾಗಿ ಅವಕಾಶ ಮಾಡಿಕೊಟ್ಟಿದೆ.

ಜಿಲ್ಲಾ ಪರಿಷತ್ ಚುನಾವಣೆಗಳಿಗೆ ಸಂಬಂಧಿಸಿ ನಮ್ಮ ಪಕ್ಷದ ಘಟಕಗಳಿಂದ ಹಾಗೂ ರಾಜ್ಯದ ವಿವಿಧ ವಿರೋಧ ಪಕ್ಷಗಳಿಂದ ಮತ್ತು ಎಲ್ಲಾ ಮೂಲೆಗಳಿಂದ ಬಂದ ದೂರುಗಳನ್ನು ಪರಿಶೀಲಿಸಿದರೆ, ಚುನಾವಣೆಯನ್ನು ಗೆಲ್ಲಲು ಜನತಾ ಪಕ್ಷವು ಎಲ್ಲಾ ಅನೈತಿಕ ವಿಧಾನಗಳನ್ನು ಉಪಯೋಗಿಸಿದೆ ಎಂಬುದು ಸ್ಫಟಿಕದಷ್ಟು ಸ್ಪಷ್ಟ – ದೊಡ್ಡ ಪ್ರಮಾಣದಲ್ಲಿ ಹಣ, ಬಲ ಪ್ರಯೋಗದ ತಂತ್ರಗಳು, ವಿಸ್ತೃತ ಪ್ರಮಾಣದಲ್ಲಿ ಹೆಂಡ, ಸಾರಾಯಿ ಮತ್ತು ವಿದೇಶಿ ಮದ್ಯ, ಸರಕಾರಿ ಯಂತ್ರದ ಉಪಯೋಗ, ಅಗ್ಗದ ಭರವಸೆಗಳು, ಇತ್ಯಾದಿ. ಕಾಂಗ್ರೆಸ್ಸು (ಐ) ಕೂಡಾ ಇಂತಹವೇ ವಿಧಾನಗಳನ್ನು ಉಪಯೋಗಿಸಿದೆ ಎಂಬುದೂ ಸತ್ಯ.

ಆದ ಕಾರಣ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭಿಪ್ರಾಯದಲ್ಲಿ ರಾಜ್ಯದ ರಾಜಕೀಯದಲ್ಲಿ ಜಿಲ್ಲಾ ಪರಿಷತ್ ಚುನಾವಣೆಗಳು ಒಂದು ಹೊಸ ಅಧ್ಯಾಯವನ್ನು ತರಲಿಲ್ಲ. ಇನ್ನೊಂದು ಬಾರಿ ರಾಜ್ಯದಲ್ಲಿ ಗ್ರಾಮಾಂತರದ ಕುಲಕ್ ಮತ್ತು ಭೂಮಾಲಕ ಶಕ್ತಿಗಳು ಅಧಿಕಾರಕ್ಕಾಗಿ ಕಚ್ಚಾಟ ಮಾಡುವುದಕ್ಕೆ ಈ ಚುನಾವಣೆಗಳು ಅವಕಾಶ ಮಾಡಿ ಕೊಟ್ಟಿದೆ.

ರಾಜ್ಯದ ವಿಶಾಲ ಪ್ರಮಾಣದ ರೈತರ ಮತ್ತು ಕೃಷಿಕೂಲಿಗಾರರ ಜ್ವಲಂತ

[8ನೇ ಪುಟನೋಡಿ]

ಮಾರುತಿ ಮಾನ್‌ಪಡೆ ಅವರ ವಿಜಯ

ಕರ್ನಾಟಕದಲ್ಲಿ ನಡೆದ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಚಿಂಚಲಸೂರ ಮತಕ್ಷೇತ್ರದಿಂದ ಸಿ.ಪಿ.ಐ. (ಎಂ) ಪಕ್ಷದ ಅಭ್ಯರ್ಥಿ ಮಾರುತಿ ಮಾನ್‌ಪಡೆ ಅವರು ಜನತಾ ಮತ್ತು ಕಾಂಗ್ರೆಸ್ ಸೋಲಿಸಿ ಪ್ರಚಂಡ ಬಹುಮತದಿಂದ ಆರಿಸಿ ಬಂದಿದ್ದಾರೆ. ಕಾ. ಮಾನು ಅವರಿಗೆ 7707 ಮತ, ಬಿದ್ದಿದೆ. ಕಾಂಗ್ರೆಸ್‌ಗೆ 2669 ಮತ, ಜನತಾಕ್ಕೆ ಅದಕ್ಕಿಂತಲೂ ಕಡಿಮೆ ಮತ 5038 ಹೆಚ್ಚು ಮತಗಳಿಸಿ, ಮಾರುತಿ ಮಾನ್‌ಪಡೆ ಆರಿಸಿ ಬಂದಿದ್ದಾರೆ.

ತಡವಾಗಿ ಎಚ್ಚೆತ್ತ ಬೂಟಾಸಿಂಗ್

ಭಾರತ ದೇಶದ ಸಮಗ್ರತೆಗೆ ಆತಂಕ ಉಂಟು ಮಾಡಿ ಅದನ್ನು ಅಭದ್ರಗೊಳಿಸುವ ದುರುದ್ದೇಶದಿಂದ ಅಮೇರಿಕನ್ ಸಾಮ್ರಾಜ್ಯಶಾಹಿಗಳೂ, ಕ್ರಿಶ್ಚನ್ ಮಿಶಿನರಿಗಳೂ ಈಶಾನ್ಯ ಪ್ರದೇಶದಲ್ಲಿ ತೀವ್ರಗಾಮಿ, ಛಿದ್ರಕಾರಿ ಶಕ್ತಿಗಳಿಗೆ ಅಪಾರ ಹಣದ ಸಹಾಯ ಮಾಡುತ್ತಿವೆ, ಈ ಕುತಂತ್ರವನ್ನು ಸಮರ್ಥವಾಗಿ ಎದುರಿಸಲು ಯೋಗ್ಯಕ್ರಮ ಕೈಗೊಳ್ಳದಿದ್ದರೆ ದೇಶದ ಐಕ್ಯತೆಗೆ ಧಕ್ಕೆ ಉಂಟಾಗುತ್ತದೆಂದು ಕಳೆದ ಹಲವಾರು ವರ್ಷಗಳಿಂದಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೇಂದ್ರ ಸರಕಾರವನ್ನ ಎಚ್ಚರಿಸುತ್ತಲೇ ಬಂದಿತ್ತು. ಹಿಂದಿನ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರಾಗಲೀ, ಈಗಿನ ಪ್ರಧಾನಿ ರಾಜೀವ ಗಾಂಧಿಯವರಾಗಲೀ ತಮ್ಮದೇ ಆದ ರಾಜಕೀಯ ಸ್ವಾರ್ಥಕ್ಕಾಗಿ ಅದನ್ನು ಕಡೆಗಣಿಸುತ್ತ ಬಂದಿದ್ದರು. ಇತ್ತೀಚೆಗೆ ಮಾಡಿಕೊಂಡ ಪಂಜಾಬ್ ಒಪ್ಪಂದವನ್ನು ಜ್ಯಾರಿ ಮಾಡುತ್ತಿಲ್ಲ. ಮಿಜೋರಾಂನಲ್ಲಿ ತಮ್ಮ ಪಕ್ಷದ ಮಂತ್ರಿ ಮಂಡಲಕ್ಕೆ ರಾಜೀನಾಮೆ ಕೊಡಿಸಿ ದೇಶದ್ರೋಹಿ ಲಾಲ್‌ಡೆಂಗಾನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರು. ತ್ರಿಪುರಾದಲ್ಲಿ ಗುಡ್ಡಗಾಡು ಜನರಲ್ಲಿ ಪ್ರತ್ಯೇಕತಾವಾದವನ್ನು ಬೆಳೆಸುತ್ತಿರುವ ಪ್ರತಿಗಾಮಿ ಶಕ್ತಿಯಾದ ತ್ರಿಪುರಾ ಉಪಜಾತಿ ಜುಬಾ ಸಮಿತಿ [ಟಿಯುಜೆಎಸ್] ಜೊತೆಯಲ್ಲಿ ಸೇರಿ ಸಿ. ಪಿ. ಐ. [ಎಂ] ಸರಕಾರವನ್ನು ವಿರೋಧಿಸುತ್ತಿದ್ದಾರೆ. ಆ ಪ್ರದೇಶದಲ್ಲಿ ನರಹತ್ಯೆ ಮಾಡುತ್ತಿರುವ ಟಿ. ಎನ್. ವಿ. ಕೂಟಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಪ್ರತ್ಯೇಕ ನೇಪಾಳಿ ರಾಜ್ಯದ ಕನಸು ಕಾಣುತ್ತಿರುವ ಸುಭಾಷ್ ಗೈಸಿಂಗನಿಗೆ ಪ. ಬಂಗಾಲದ ಜ್ಯೋತಿಬಸು ಸರಕಾರದ ವಿರುದ್ಧ ಬಂಡಾಯ ಏಳುವಂತೆ ಮಾಡಲು ಅವನು ಗುರ್ಖಾಲ್ಯಾಂಡಿಗಾಗಿ ನಡೆಸಿರುವ ಹಿಂಸಾತ್ಮಕ ಚಳುವಳಿ ಅರಾಷ್ಟ್ರೀಯವಲ್ಲೆಂದು ರಾಜೀವ ಗಾಂಧಿ ಹೇಳುತ್ತಿದ್ದಾರೆ.

ಕೇಂದ್ರ ಸರಕಾರದ ಈ ನೀತಿ ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ನೀಡುತ್ತ ಬಂದಿದೆ.

ಈಗ ಕೇಂದ್ರ ಗೃಹ ಸಚಿವ ಬೂಟಾ ಸಿಂಗ್ ಅವರು ಈಗ ಎಚ್ಚತ್ತಂತೆ ಕಂಡು ಬರುತ್ತದೆ. ಅಸ್ಸಾಂ ಸಂಯುಕ್ತ ವಿಮೋಚನಾ ರಂಗವೆಂಬ ಹೊಸ ಉಗ್ರಗಾಮಿ ತಂಡವೊಂದು ಬಲಗೊಳ್ಳುತ್ತಿದೆಂದೂ, ಈಶಾನ್ಯದಲ್ಲಿ ಚಟುವಟಿಕೆ ನಡೆಸುತ್ತಿರುವ ನಾನಾ ಉಗ್ರಗಾಮಿ ತಂಡಗಳ ನಡುವೆ ಸಮನ್ವಯ ಹೆಚ್ಚುತ್ತಿರುವ ಸೂಚನೆಗಳು ತೋರಿ ಬರುತ್ತಿವೆಯೆಂದೂ ಹೊಸತಾಗಿ ತಲೆ ಎತ್ತುತ್ತಿರುವ ಈ ಪಿಡುಗಿನ ವಿರುದ್ಧ ಎಚ್ಚರದಿಂದಿರಬೇಕೆಂದು ಹೇಳಿದ್ದಾರೆ. ಈ ಮಾತನ್ನು ಗೃಹ ಮಂತ್ರಿಯವರು ಪ್ರಧಾನಿ ರಾಜೀವ ಗಾಂಧಿಯವರಿಗೆ ಹೇಳಿ, ಇಂಥ ಉಗ್ರಗಾಮಿಗಳಿಗೆ ಅಪ್ರತ್ಯಕ್ಷವಾಗಿ ಪ್ರೋತ್ಸಾಹಿಸುವ ನಿಲುವು ಕೈಬಿಡುವಂತೆ ಮಾಡಿದರೆ ದೇಶ ಹಿತವಾಗುತ್ತದೆಂದು ಹೇಳಬಿಚ್ಛಿಸುತ್ತೇವೆ.

ಜಿಲ್ಲಾ ಪರಿಷತ್ ಚುನಾವಣೆ - ಒಂದು ವಿಶ್ಲೇಷಣೆ

1983 ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದ ನಂತರ ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಆಡಳಿತ ವ್ಯವಸ್ಥೆ ಬಹಳ ಪ್ರಚಾರ ಪಡೆದಿತ್ತು. 1984ರಲ್ಲೇ ಚುನಾವಣೆ ನಡೆಸಿ ಜನಸಾಮಾನ್ಯರಿಗೆ ಅಧಿಕಾರ ಹಸ್ತಾಂತರಿಸಲಾಗುವುದೆಂಬ ಆಶ್ವಾಸನೆಯನ್ನು ಮಂತ್ರಿ ಅಬ್ದುಲ್ ನಜೀರ್‌ಸಾಬ್ ಕೊಟ್ಟಿದ್ದರು. ಕರ್ನಾಟಕ ವಿಧಾನಸಭೆಯಲ್ಲಿ ಜಿಲ್ಲಾ ಪರಿಷತ್ ಮಸೂದೆ ಸರ್ವಾನುಮತದಿಂದ ಪಾಸಾದರೂ ಕೂಡ ಕೇಂದ್ರ ಸರಕಾರ ಅದಕ್ಕೆ ಮಂಜೂರಿ ಕೊಡುವಲ್ಲಿ ಎರಡು ವರ್ಷಕ್ಕೂ ಹೆಚ್ಚು ಕಾಲ ತಡಮಾಡಿತು. ಜನತಾ ಸರಕಾರ ಅಧಿಕಾರ ವಿಕೇಂದ್ರೀಕರಣದಂಥ ಮಹತ್ವದ ಕಾರ್ಯವನ್ನು ಅನುಷ್ಠಾನದಲ್ಲಿ ತರುತ್ತಿರುವುದನ್ನು ಬಹುಶಃ ಕಾಂಗ್ರೆಸ್ ಹೈಕಮಾಂಡ್ ಒಪ್ಪಿಕೊಂಡಂತೆ ಕಾಣಲಿಲ್ಲ. ಕರ್ನಾಟಕ ಪ್ರಾಂತ ರೈತ ಸಂಘ, ಸಿ ಪಿ. ಐ. (ಎಂ) ಹಾಗೆಯೇ ಇತರ ಜನಾಭಿಪ್ರಾಯಕ್ಕೆ ಮಣಿದು ಕೊನೆಗೊಮ್ಮೆ ಆ ಮಸೂದೆ ರಾಷ್ಟ್ರಾಧ್ಯಕ್ಷರ ಸಹಿ ಕಂಡಿತು. ಜಿಲ್ಲಾ ಪರಿಷತ್ ಚುನಾವಣೆಗೆ ಬಹಳ ಆತುರ ತೋರಿಸಿದ್ದ ಜನತಾ ಸರಕಾರ ಬರಗಾಲ ಮುಂತಾದ ನೆವ ಮುಂದೆ ಮಾಡಿ 2-3 ಸಲ ಚುನಾವಣೆ ಮುಂದೆ ಹಾಕಿತು. ಕೊನೆಗೆ ತರಾತುರಿಯಿಂದ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಚುನಾವಣೆ ಸಾರಿತು. ಈಗ ಜಿಲ್ಲಾ ಪರಿಷತ್ ಚುನಾವಣೆ ಮುಗಿದು ಫಲಿತಾಂಶ ಬಹಿರಂಗವಾಗಿದೆ. ಮಂಡಲ ಪಂಚಾಯತ್ ಚುನಾವಣೆ ನಡೆದಿದೆ.

ರಾಜ್ಯದ 19 ಜಿಲ್ಲೆಗಳಲ್ಲಿ 889 ಸ್ಥಾನಗಳಿಗೆ ಚುನಾವಣೆ ನಡೆಯಿತು. ವಿದುರಾಶ್ವತ್ಥದ ಒಂದು ಸ್ಥಾನ ಜನತಾ ಪಕ್ಷಕ್ಕೆ ಅವಿರೋಧವಾಗಿ ಲಭಿಸಿದೆ. ಉಮೇದುವಾರನ ಮೃತ್ಯುವಿನಿಂದಾಗಿ ಇನ್ನೊಂದು ಚುನಾವಣೆ ನಡೆಯಬೇಕಾಗಿದೆ. ಸದ್ಯ ಚುನಾವಣೆ ನಡೆದ 887 ಸ್ಥಾನಗಳ ಪೈಕಿ ಜನತಾ 449, ಕಾಂಗ್ರೆ 395, ಬಿ.ಜೆ.ಪಿ. 6, ಮಹಾರಾಷ್ಟ್ರ ಏಕೀಕರಣ ಸಮಿತಿ8, ಸಿ.ಪಿ.ಐ.(ಎಂ) 1, ಜನತಾ ಬೆಂಬಲಿತ ಸಿ. ಪಿ. ಐ. 1, ಇಂದಿರಾಗಾಂಧಿ ಕಾಂಗ್ರೆಸ್ 2, ರುದ್ರಪ್ಪನ ರೈತಸಂಘ 1, ಸ್ವತಂತ್ರರು 22. 14 ಜಿಲ್ಲೆಗಳಲ್ಲಿ ಜನತಾ ಪಕ್ಷಕ್ಕೆ ಬಹುಮತವಿದೆ. ಕೊಡಗು, ದಕ್ಷಿಣ ಕನ್ನಡ, ತುಮಕೂರು, ಚಿತ್ರದುರ್ಗಾ, ಮತ್ತು ಚಿಕ್ಕಮಗಳೂರಿನಲ್ಲಿ ಕಾಂಗ್ರೆಗೆ ಬಹುಮತವಿದ್ದರೂ ಕೂಡ ಆಯಾ ಜಿಲ್ಲೆಯ ಶಾಸಕರೂ, ಲೋಕಸಭಾ ಸದಸ್ಯರೂ ಆಯಾ ಜಿಲ್ಲೆಯ ಜಿಲ್ಲಾ ಪರಿಷತ್ತಿನ ಸದಸ್ಯರಾಗುವುದರಿಂದ ತುಮಕೂರು, ಚಿತ್ರದುರ್ಗಾ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜನತಾ ಪಕ್ಷದವರೇ ಬಹುಮತ ಪಡೆಯುವಂತಾಗಿದೆ. ಹೀಗೆ ರಾಜ್ಯದ ಒಟ್ಟು 19 ಜಿಲ್ಲೆಗಳ ಪೈಕಿ 17ಜನತಾ ಪಕ್ಷ 2 ಕಾಂಗ್ರೆ ಬಹುಮತ ಪಡೆದಂತಾಯಿತು. ತನ್ನ ನಾಲ್ಕು ವರ್ಷಗಳ ಆಡಳಿತದಿಂದ ಜನ ಸಂತೃಪ್ತರಾಗಿದ್ದಾರೆ, ಗ್ರಾಮಾಂತರ ಪ್ರದೇಶದ ಜನ ತನ್ನ ಜನಪ್ರಿಯತೆಗೆ ಮತ ನೀಡುತ್ತಾರೆಂದು ಹೇಳಿ ಚುನಾವಣೆಗೆ ಧುಮುಕಿದ ಜನತಾ ಪಕ್ಷ ಕಾಂಗ್ರೆಗಿಂತ ಬರೀ 54 ಸ್ಥಾನಗಳನ್ನಷ್ಟೇ ಹೆಚ್ಚಿಗೆ ಪಡೆಯಲು ಸಾಧ್ಯವಾಗಿದೆ.

1983 ರಲ್ಲಿ ಸಿ. ಪಿ. ಐ. (ಎಂ) ಸಿ. ಪಿ. ಐ., ಬಿ. ಜೆ. ಪಿ. ಜೊತೆಯಲ್ಲಿ ಚುನಾವಣೆ ಹೊಂದಾಣಿಕೆ ಮಾಡಿಕೊಂಡು, 1985 ರಲ್ಲಿ ಸಿ. ಪಿ. ಐ. (ಎಂ), ಸಿ. ಪಿ. ಐ. ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದ ಜನತಾ ಪಕ್ಷ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಯಾವ ಹೊಂದಾಣಿಕೆಯಿಲ್ಲದೆ ಸ್ವತಂತ್ರವಾಗಿಯೇ ಸ್ಪರ್ಧಿಸಿತ್ತು. 1985 ರ ವಿಧಾನ ಸಭೆ ಚುನಾವಣೆಯಲ್ಲಿ ತಾನು ಪಡೆದ ಬಹುಮತ(139 ಶಾಸಕರು) ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ತನ್ನ ಪಕ್ಷದಲ್ಲಿ ಉಮೇದುವಾರಿಕೆಗಾಗಿ ನಡೆದ ಪೈಪೋಟಿ, ಜಿಲ್ಲಾ ಮಟ್ಟದಲ್ಲಿ ಕೆಲವು ಪ್ರಮುಖರಿಂದ ಒಪ್ಪಂದಕ್ಕೆ ವಿರೋಧ - ಇವುಗಳಿಂದಾಗಿ ಕೆಳಮಟ್ಟದಲ್ಲೂ ಒಪ್ಪಂದ ಸಾಧ್ಯವಾಗಲಿಲ್ಲ. ಕೆಲವು ಜಿಲ್ಲೆಗಳಲ್ಲಿ ಸಿ. ಪಿ. ಐ. (ಎಂ) ಜೊತೆಯಲ್ಲಿ ಒಪ್ಪಂದ ಮಾಡಿಕೊಳ್ಳುವ ಸೂಚನೆಗಳು ಮುಂದೆ ಬಂದರೂ ಕೂಡ ರಾಜ್ಯ ಮಟ್ಟದ ಮುಖಂಡತ್ವ ಅದಕ್ಕೆ ಒಪ್ಪಲಿಲ್ಲ. ಅಧಿಕಾರ ವಿಕೇಂದ್ರಿಕರಣಗೊಳಿಸುವ ಜಿಲ್ಲಾ, ಗ್ರಾಮಮಟ್ಟಕ್ಕೆ ಆಡಳಿತೆ ಕೊಂಡೊಯ್ಯುವ ಜಿಲ್ಲಾ ಪರಿಷತ್ತಿಗೆ ಮೌಲ್ಯಾಧರಿತ, ನಿಷ್ಠಾವಂತ, ವ್ಯಕ್ತಿಗಳು ಆರಿಸಿ ಬರುವುದು ಅತ್ಯಗತ್ಯ. ಆ ದಿಸೆಯಲ್ಲಿ ಜನತಾ ಮತ್ತು ಕಾಂಗ್ರೆಪಕ್ಷ ಸಂಪೂರ್ಣ ವಿಫಲವಾಗಿದೆ. ತಿಕೇಟ ಪಡೆಯಲಿಕ್ಕೂ, ಚುನಾವಣೆಯಲ್ಲೂ ಹಣ ನೀರಿನಂತೆ ಹರಿದಾಡಿತು. ಆಡಳಿತೆ - ಅಭಿವೃದ್ಧಿ ಕಾರ್ಯದಲ್ಲಿ, ಅನುಭವ ಪಡೆದಂತ ವ್ಯಕ್ತಿಗಳು ಸ್ಪರ್ಧಿಗಿಳಿದಿಲ್ಲ. ಗ್ರಾಮಾಂತರ ಪ್ರದೇಶದ ಜನರ ಪ್ರಶ್ನೆಗಳಿಗೆ ಸ್ಪಂದಿಸುವ, ಅವುಗಳ ನಿವಾರಣೆಗಾಗಿ ನಿಷ್ಟೆಯಿಂದ ದುಡಿಯುವ, ಸಮಸ್ಯೆಗಳ ಪರಿಹಾರಕ್ಕೆ ಯಾವದೇ ರೀತಿಯ ಅಡೆತಡೆ ಉಂಟಾದರೆ ಚಳುವಳಿ, ಹೋರಾಟಗಳ ಮೂಲಕ ಜನಜಾಗೃತಿಗೊಳಿಸಿ ಪರಿಹಾರ ಒದಗಿಸಿ ಕೊಡುವ, ಗ್ರಾಮಾಂತರ ಪ್ರದೇಶದ ರೈತ-ಕೃಷಿ ಕಾರ್ಮಿಕರಲ್ಲಿ ರಾಜಕೀಯ ತಿಳುವಳಿಕೆ ಉಂಟು ಮಾಡಿ, ಹೊಸ ಸಾಮಾಜಿಕ ಸಂಭಂಧ ಹೊಸ ಸಮಾಜ ನಿರ್ಮಾಣದತ್ತ ಅವರನ್ನು ಕೊಂಡೊಯ್ಯುವ ಕಾರ್ಯಕ್ರಮ ಹಮ್ಮಿಕೊಂಡವರಿಲ್ಲ.

ನಮ್ಮ ರಾಜ್ಯದಲ್ಲಿ ನಡೆದ ಮೊದಲ ಜಿಲ್ಲಾ ಪರಿಷತ್ ಚುನಾವಣೆಗಳಿವು ಈ ಜಿಲ್ಲಾ ಪರಿಷತ್ ಚುನಾವಣೆಯ ಮೂರ್ತ ಅನುಭವನ್ನಿಲ್ಲಿ ನೀಡುತ್ತಾರೆ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾ|| ಎನ್ನೆಯವರು

ಜಿಲ್ಲಾ ಪರಿಷತ್ತಿಗಾಗಿ ಚುನಾವಣಾ ವೇಳಾಪಟ್ಟಿ ಪ್ರಕಟವಾದಕೂಡಲೇ ಬಿಜಾಪುರದಲ್ಲಿ ನಾನು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಮತ್ತು ಬೀದರ್‌ನ ಸಾರ್ವಜನಿಕ ಭಾಷಣದಲ್ಲಿ ನಾನು ಮತ್ತು ಸಂಗ್ರಾ ಒಂದು ವಿಷಯ ಸ್ಪಷ್ಟಪಡಿಸಿದ್ದೆವು. ಗ್ರಾಮ ಮಟ್ಟಕ್ಕೆ ಅಧಿಕಾರ ವಿಕೇಂದ್ರಿಕರಣವಾಗುವುದನ್ನು ಸಿ.ಪಿ.ಐ. (ಎಂ) ಸ್ವಾಗತಿಸುತ್ತದೆ. ಸಿ.ಪಿ.ಐ. (ಎಂ) ಮುಖಂಡತ್ವದ ಪ. ಬಂಗಾಲದ ಎಡರಂಗ ಸರ್ಕಾರ ಜಾರಿಯಲ್ಲಿ ತಂದಿರುವ ಜಿಲ್ಲಾ ಪರಿಷತ್ ಮಸೂದೆಯಿಂದ ಸ್ಫೂರ್ತಿ ಪಡೆದು ಅಬ್ದುಲ್ ನಜೀರ್ ಸಾಬ್ ಕರ್ನಾಟಕದಲ್ಲೂ ಅಧಿಕಾರ ವಿಕೇಂದ್ರೀಕರಣದ ಕನಸು ಕಂಡಿದ್ದಾರೆ. ಆದರೆ ನಮ್ಮಲ್ಲಿ ಆ ಕನಸು ನನಸಾಗಲು ಸಾಕಷ್ಟು ಕಾಲಾವಕಾಶ ಬೇಕಾದೀತು. ಪ. ಬಂಗಾಲದಲ್ಲಿ ಸಿ.ಪಿ.ಐ.(ಎಂ) ಮತ್ತು ಎಡರಂಗ ರೈತ-ಕಾರ್ಮಿಕರ ಚಳುವಳಿಗಳ ಮಧ್ಯೆ, ನಿರಂತರ ಹೋರಾಟಗಳಲ್ಲಿ ಪಳಗಿದವರನ್ನೆ ಸ್ಪರ್ಧೆಗೆ ನಿಲ್ಲಿಸಿ ಆರಿಸಿ ತಂದು ಅಧಿಕಾರದ ಜವಾಬ್ದಾರಿ ಅವರಿಗೊಪ್ಪಿಸುತ್ತಿದೆ. ನಮ್ಮಲ್ಲಿ ಜನತಾ ಕಾಂಗ್ರೆಸ್ ಪಕ್ಷಗಳು ಗ್ರಾಮಾಂತರ ಪ್ರದೇಶಗಳಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳ ಪ್ರತಿನಿಧಿಗಳನ್ನು ಆರಿಸುವುದರ ಮೂಲಕ ಜಿಲ್ಲಾ ಪರಿಷತ್ತುಗಳನ್ನು ನಗರ ಸಭೆಗಳಾಗಿ ಪರಿವರ್ತಿಸುವ ಸಂಭವವಿದೆಎಂದು ಎಚ್ಚರಿಸಿದ್ದೆವು. ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಈ ಎರಡೂಪಕ್ಷಗಳು ಉಮೇದುವಾರರನ್ನು ಆರಿಸುವಾಗ, ಆ ಸ್ಪರ್ಧಿಗಳು ನಡೆಸಿದ ಚುನಾವಣಾ ಪ್ರಚಾರ, ಓಟು ಪಡೆಯಲು ಉಪಯೋಗಿಸಿದ ತಂತ್ರ-ಜಾಲ, ಶೇಂದಿ, ಹಣ, ಬೆದರಿಕೆ, ಗುಂಡಾಗಿರಿ, ಬೋಗಸ್ ಮತದಾನಗಳೆಲ್ಲ ನಮ್ಮ ಎಚ್ಚರಿಕೆಯನ್ನು ನಿಜಗೊಳಿಸಿವೆ.

ಅಭಿವೃದ್ಧಿ ಕಾರ್ಯಗಳ ಗತಿ ಏನಾದೀತು ?

ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಅಭ್ಯರ್ಥಿಯಾಗಲು ಒಂದು ಲಕ್ಷ ರೂ. ಖರ್ಚುಮಾಡಿದ್ದೇನೆಂದು ಒಬ್ಬ ಅಭ್ಯರ್ಥಿಯಿಂದಲೇ ಕೇಳಿಕೊಂಡೆ. ಚುನಾವಣೆಗಾಗಿ ಒಂದೆರಡು ಲಕ್ಷ ಖರ್ಚಾದರೂ ಚಿಂತೆಯಿಲ್ಲ, ಆರಿಸಿ ಬರಲೇಬೇಕೆಂಬ ಇಚ್ಛೆ ಅವನದು. ಖರ್ಚು ಮಾಡಿದ ಹಣವನ್ನು ಹೇಗೆ ತುಂಬಿಸಿಕೊಳ್ಳುತ್ತೀಯಪ್ಪಾ ಎಂದು ಕೇಳಿದಾಗ "ನಮ್ಮ ಜಿಲ್ಲೆಗೆ ರೂ. 33 ಕೋಟಿ ಸಂದಾಯವಾಗುತ್ತದೆ. ರೂ. 3 ಲಕ್ಷ ಗಿಟ್ಟಿಸುವುದೇನೂ ಮಹತ್ವವಲ್ಲಾ" ಎಂಬ ಉತ್ತರ ಬರಬೇಕಾದರೆ ಅಭಿವೃದ್ಧಿ ಕಾರ್ಯಗಳ ಗತಿ ಏನಾದಿತೆಂಬುದನ್ನು ಸುಲಭವಾಗಿಯೇ ಊಹಿಸಬಹುದಾಗಿದೆ. ಅಲ್ಲಿಯ ಪಕ್ಕದ ಹಳ್ಳಿಯಲ್ಲಿ ಬಾಂಬದಾಳಿಯಿಂದ ನೆಲಸಮವಾದಂತೆ ಕಾಣುವ 16 ಜನತಾ ಮನೆಗಳ ದುಸ್ಥಿತಿ (ಅಲ್ಲಿ ಯಾರೂ ವಾಸವಾಸವಾಗಿಲ್ಲ) ಕಣ್ಣಮುಂದೆ ಬಂತು.

ಜನತಾ ಪಕ್ಷದ ತಿಕೇಟಿಗಾಗಿ ಹಣ ಖರ್ಚು ಮಾಡಿದ ಒಬ್ಬ ವ್ಯಕ್ತಿ ಅದು ದೊರಕದಿದ್ದಾಗ ನಮ್ಮ ಪಕ್ಷದ ಉಮೇದುವಾರನಿಗೆ ಬೆಂಬಲ ತೋರಿಸುತ್ತಿದ್ದಾನೆಂದು ತಿಳಿದ ಕೂಡಲೇ ರಾಜ್ಯ ಮಟ್ಟದ ಸಮಿತಿಯಲ್ಲಿ ಅವನಿಗೆ ಸದಸ್ಯತ್ವ ನೀಡುವ ಆಶ್ವಾಸನೆ ದೊರೆತ ಕೂಡಲೇ ನಮ್ಮ ಪಕ್ಷದ ಉಮೇದುವಾರನಿಗೆ ದುಡಿಯುತ್ತಿರುವ ಜನರ ಮೇಲೆ ಒತ್ತಡ ತಂದು ಹಲವಾರು ನಿರ್ಬಂಧಗಳನ್ನೂ ಹಾಕಿ, ಕೊನೆಗೆ ಬೆದರಿಸುವ ಅಸ್ತ್ರವನ್ನೂ ಉಪಯೋಗಿಸಿದ್ದಾರೆ. ಅಂಥ ಘಟನೆಗಳು ಸಾವಿರಾರು.

"ನಿಮ್ಮ ಯುವಕರೆಲ್ಲ ಊರಲ್ಲಿ ಕೆಲವು ಒಳ್ಳೆಯ ಕೆಲಸ ಮಾಡಿದ್ದಾರೆ. ನಿಮ್ಮ ಪಕ್ಷ ಗೆಲ್ಲಬೇಕೆಂದು ನಮ್ಮದೂ ಆಸೆ. ಆದರೆ....?" ಮತ್ತಿಹಳ್ಳಿಯಲ್ಲಿ ನಾಲ್ಕು ಹಿರಿಯರ ಅಭಿಪ್ರಾಯ. ಅರಣ್ಯ ಅಧಿಕಾರಿಗಳು ಕಟ್ಟಿಗೆ ಮಾರುವ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದಾಗ ಅದರ ವಿರುದ್ಧ ಒಂದು ಸಾವಿರದಷ್ಟು ಜನರ ಬೃಹತ್ ಮೆರವಣಿಗೆಯನ್ನು ಹೊಸಪೇಟೆಗೆ ತೆಗೆದುಕೊಂಡು ಹೋಗಿ (ಸಾಧಾರಣ 25 ಕಿ. ಮೀಟರ್) ಅವರಿಗೆ ನ್ಯಾಯ ಕೊಡಿಸಿದವರು ಸಿ. ಪಿ. ಐ. (ಎಂ) ಕಾರ್ಯಕರ್ತರೆಂದು ಮತದಾರರಿಗೆ ಅರಿವಾಗದಂತೆ ಮಾಡಿದ್ದಾರೆ. ಕೆಲವು ಹಳ್ಳಿಗಳಲ್ಲಿ ಕಾಂಗ್ರೆಸ್-ಜನತಾದವರಿಗೆ ಪ್ರವೇಶ ಕೂಡ ಸಿಕ್ಕಿಲ್ಲ. ಊರ ಜನ ನಮ್ಮ ಭಾಷಣ ಕೇಳಲು ರಾತ್ರಿ ಹೊತ್ತಿನವರೆಗೂ ಕಾಯುತ್ತಿದ್ದರು. ಹೊಸ ವಿಚಾರಗಳನ್ನು ತಿಳಿಯ ಹೇಳಬೇಕೆಂದು ಅಪೇಕ್ಷಿಸುತ್ತಾರೆ.

ನೂರಾರು ಕಾರ್ಯಕರ್ತರು ಉಪವಾಸ-ವನವಾಸ ಬಿದ್ದು, ಹಸಿವು ದಣಿವುಗಳನ್ನು ಕಡೆಗಣಿಸಿ, ಗುಂಡಾಗಿರಿ, ಬೆದರಿಕೆಗಳನ್ನೆದುರಿಸಿ ಪ್ರಚಾರ ಮಾಡಿದ್ದಾರೆ. ತಮ್ಮ ನಿಷ್ಠೆ ವ್ಯಕ್ತ ಮಾಡಿದ್ದಾರೆ. ಧೈರ್ಯ ತೋರಿಸಿದ್ದಾರೆ. ಈ ಚುನಾವಣೆಯಿಂದಾಗಿ ನೂರಾರು ಹೊಸ ಕಾರ್ಯಕರ್ತರು ಹುಟ್ಟಿಕೊಂಡಿದ್ದಾರೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಜನತಾ ಬಹುಮತ ಗಳಿಸಿರುವ ಬಗ್ಗೆ ಅಬ್ದುಲ್ ನಜೀರ್‌ಸಾಬ್ ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಎಲ್ಲಾ ಜಿಲ್ಲಾ ಪರಿಷತ್ತಿನಲ್ಲೂ ಜನತೆ ತಮ್ಮ ರಾಜಕೀಯ ಮುತ್ಸದ್ದಿತನವನ್ನು ಪ್ರದರ್ಶಿಸಿದ್ದಾರೆಂದು ಪ್ರತಿಕ್ರಿಯೆ ವ್ಯಕ್ತ ಮಾಡಿದ್ದಾರೆ.

ಆದರೆ ಮೂರನೇ ತಾರೀಕಿನಿಂದು ಮತ್ತು ಅನಂತರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಸುದ್ದಿಗಳು ನಜೀರ್ ಸಾಹೇಬರ ಅಭಿಪ್ರಾಯವನ್ನು ಅಲ್ಲಗಳೆಯುತ್ತಿವೆ.

ಮತದಾರರಿಗೆ ಹಂಚಲೆಂದು ಗುರುವಾರ ರಾತ್ರಿ ಲಾರಿಯಲ್ಲಿ ಹೆಂಡವನ್ನು ಸಾಗಿಸುತ್ತಿದ್ದಾರೆಂಬ ಆಪಾದನೆಯ ಮೇಲೆ ಬಿಡದಿಯಲ್ಲಿ ಜನತಾ ಪಕ್ಷದವರನ್ನೂ ದೊಡ್ಡಬಳ್ಳಾಪುರದ ಕಾಂಗ್ರೆಸ್ಸಿಗರನ್ನೂ ಪೋಲೀಸರು ಬಂಧಿಸಿದ್ದಾರೆ. ಹೊಸಕೋಟೆ ತಾಲೂಕಿನ ಗಿಡ್ಡಪ್ಪನಹಳ್ಳಿ ಮತಗಟ್ಟೆಯಲ್ಲಿ / ಕಾಂಗ್ರೆ ಜನತಾ ಬೆಂಬಲಿಗರಿಂದ ಕಲ್ಲು ತೂರಾಟ. ಕೋಲಾರ ಜಿಲ್ಲೆಯ

ಎಸ್. ಕೆ. ಉಪಾಧ್ಯಾಯ

ಬಾಗೇಪಲ್ಲಿ ತಾಲೂಕಿನ ಒಂದು ಮತಗಟ್ಟೆಯನ್ನ ಆಕ್ರಮಿಸಿಕೊಂಡು ಮತಗಟ್ಟೆಗಳನ್ನು ಕಿತ್ತಿಕೊಳ್ಳಲಾಗಿದೆ. ಚಿಂತಾಮಣಿಯ ಮತಗಟ್ಟೆಗಳಲ್ಲೂ ಅಂಥದ್ದೇ ಘಟನೆಗಳು ನಡೆದಿವೆ. ಸುಳ್ಳು ಮತದಾನವಾದುದರಿಂದ 300 ಜನರಿಗೆ ಮತದಾನದ ಹಕ್ಕು ನಿರಾಕರಿಸಲಾಯಿತು ಕೆಲವು ಕಡೆ ಮತಪತ್ರಿಕೆಗಳನ್ನೇ ಹರಿದು ಹಾಕಲಾಯಿತು. ಗುಲಬುರ್ಗಾದಲ್ಲಿ ಮನೆ ಮನೆಗೆ ಸ್ವಾಮಿಗಳನ್ನು ಕರೆದುಕೊಂಡುಹೋಗಿ ಅವರ ಕಾಲು ಮುಟ್ಟಿ "ಪಾದಕ್ಕೆ ಮತ" ವೆಂದು ಪ್ರತಿಜ್ಞೆ ಮಾಡಿಸಲಾಯಿತು.

ಹಳ್ಳಿಗಾಡಿನ ಶ್ರೀಮಂತ ವರ್ಗ ಜನತಾ - ಕಾಂಗ್ರೆ ಪಕ್ಷಗಳಲಿದೆ. ಆ ಪಕ್ಷಗಳಲ್ಲಿ ಸೇರಿ ತಂತಮ್ಮ ಹಿತರಕ್ಷಣೆಗಾಗಿ ಸೆಣಸುತ್ತಿದ್ದಾರೆ. ಅಧಿಕಾರಕ್ಕಾಗಿ ಆ ಪಕ್ಷಗಳಲ್ಲಿ ಪೈಪೋಟಿ ನಡೆಯುತ್ತಿರುವುದು ಸಹಜ. ಗ್ರಾಮಾಂತರ ಪ್ರದೇಶದ ಜನರನ್ನು ಅಂಥ ಪ್ರತಿಗಾಮಿ ಶಕ್ತಿಗಳ ಹಿಡಿತದಿಂದ ಬೇರ್ಪಡಿಸುವುದು ಹೇಗೆ, ಅವರನ್ನು ಸಂಘಟಿಸಿ, ಹೋರಾಟದ ಅನುಭವ ಕೊಟ್ಟು ರಾಜಕೀಯ ತಿಳುವಳಿಕೆ ನೀಡಿ, ನಿರ್ಭಯದಿಂದ ಅವರ ಹಂಗಿಲ್ಲದೇ ಉದ್ಯೋಗ, ವ್ಯವಸಾಯ ಮಾಡುವಂತೆ, ಜೀವನ ನಡೆಸುವಂತೆ ಮಾಡಬೇಕು, ಕಳೆದ ಕೆಲವು ವರ್ಷಗಳಿಂದ ಬೆಳೆದು ಬಂದ ರೈತ ಸಂಘಟನೆ ಗಳಿದ್ದಲ್ಲಿ ಡಿ. ವೈ. ಎಫ್. ಐ., ಎಸ್. ಎಫ್. ಐ. ಕೆಲಸ ಮಾಡಿದ್ದಲ್ಲಿ ಅಂಜಿಕೆಯಿಲ್ಲದೆ ಮತಗಳಿಸಲು ಸಾಧ್ಯವಾಗಿದೆ. ಸಿ.ಪಿ.ಐ. [ಎಂ] ಪಕ್ಷ, ಸಾಮೂಹಿಕ ಸಂಘಟನೆಗಳು ಹೋರಾಟ ಮಾಡಿದ ಹಲವಾರು ಕಡೆಗಳಲ್ಲಿ ಪಕ್ಷದ ಕುರಿತು ಪ್ರಚಾರವಾಗದ್ದರಿಂದ ಮತ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ.

ಸಾಮೂಹಿಕ ಸಂಘಟನೆಗಳಲ್ಲಿ ವಿಧವಿಧದ ಹೋರಾಟಗಳನ್ನು ನಡೆಸುವಾಗ ಪಕ್ಷದ ರಾಜಕಾರಣ ಜನರ ಮಧ್ಯೆ ಕೊಂಡೊಯ್ಯುವ ಅವಶ್ಯಕತೆಯನ್ನು ಸಿ. ಪಿ. ಐ. (ಎಂ) ಕೇಂದ್ರ ಸಮಿತಿ ಒತ್ತಿ ಒತ್ತಿ ಹೇಳುತ್ತಿದೆ. ಇಲ್ಲದಿದ್ದರೆ ಹೋರಾಟಕ್ಕೆ ಸಿ.ಪಿ.ಐ. [ಎಂ]ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು ಬೇಕು, ಚುನಾವಣೆಯಲ್ಲಿ ಜನತಾ - ಕಾಂಗ್ರೆಗಳಂಥ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಎಂಬು

(6ನೇ ಪುಟ ನೋಡಿ)

1986 ರಲ್ಲಿ ಕರ್ನಾಟಕ - ಒಂದು ಸಂಕ್ಷಿಪ್ತ ವಿಶ್ಲೇಷಣೆ

1986 – ಕರ್ನಾಟಕದಲ್ಲಿ ಜನತಾ ಪಕ್ಷದ 2ನೇ ಸಲದ ಆಡಳಿತೆಯ 2ನೇ ವರ್ಷ. ಜನತಾ ಪಕ್ಷದ ಆಡಳಿತೆಯು ಸಿ. ಪಿ. ಐ. (ಎಂ) ಮತ್ತು ಸಿ. ಪಿ. ಐ. ಗಳ ಮತ್ತು ಕ್ರಾಂತಿರಂಗಗಳ ಬೆಂಬಲದಿಂದ ಕಾಂಗ್ರೆಸ್ (ಐ) ಯನ್ನು ರಾಜ್ಯದಲ್ಲಿ ಪ್ರಥಮಬಾರಿ ಸೋಲಿಸಿ ಸ್ಥಾಪಿಸಲ್ಪಟ್ಟು ಅವುಗಳ ಬೆಂಬಲದಿಂದ 2 ವರ್ಷಗಳ ಕಾಲ ನಡೆಯುತ್ತಾ "ತುಲನಾತ್ಮಕವಾಗಿ" ಭ್ರಷ್ಟಾಚಾರ ರಹಿತ, ದಕ್ಷ ಮತ್ತು ಸಾಮಾನ್ಯ ಜನ ವಿಭಾಗಗಳ ರ ಧೋರಣೆಗಳನ್ನು ವಹಿಸುತ್ತಾ ಬಂದಿತ್ತು. ಆದರೆ 1985 ರಲ್ಲಿ ವಿಧಾನ ಸಭೆಯಲ್ಲಿ ಜನತಾಪಕ್ಷಕ್ಕೇನೆ 139 ಸ್ಥಾನಗಳು ದೊರೆತು ಬಹುಮತ ಬಂದ ನಂತರ ಜನತಾಪಕ್ಷದ ಆಡಳಿತೆಯಲ್ಲಿ ಯಥಾವತ್ತಾದ ಕಾಂಗ್ರೆಸ್ (ಐ)ಯ ಬಂಡವಾಳಶಾಹಿ–ಭೂಮಾಲಕ ವರ್ಗಗಳಪರ, ಪ್ರತ್ಯಕ್ಷವಾಗಿ ಶ್ರೀಸಾಮಾನ್ಯ ಜನವಿಭಾಗಗಳ ವಿರೋಧವಾಗಿರುವ ಆಡಳಿತವಾಯಿತು. ಭ್ರಷ್ಟಾಚಾರ ತೀವ್ರತರ ಬೆಳೆಯಿತು, ದಕ್ಷತೆ ಹಿಂದೇಟು ಹೊಡೆಯಿತು.

"ಮೌಲ್ಯಾಧರಿತ ಪ್ರಾಮಾಣಿಕ ಪ್ರಯತ್ನದ ಆಡಳಿತದ" ಬದಲಿ, ಕಾಂಗ್ರೆಸ್ (ಐ) ಯಂತೆ "ಮುಗ್ಧ ಜನತೆಯನ್ನು ಭ್ರಮೆಗೊಳಿಸುವ (ಪಾಪ್ಯುಲಿಸ್ಟ್) ಕ್ರಮಗಳನ್ನು ಅನುಸರಿಸಲು ಸೀರೆ, ಪಂಚೆ ವಿತರಣೆ, ಪುಸ್ತಕ, ಯೂನೀಫಾರ್ಮ್ ವಿತರಣೆ,ಇತ್ಯಾದಿ ಕೇವಲ ಮತಗಳಿಸುವ ರಾಜಕೀಯ ನಡೆಸಲು ಜನತಾ ಪಕ್ಷದ ರಾಮಕೃಷ್ಣ ಹೆಗ್ಗಡೆಯವರ ಸರಕಾರವು ತೊಡಗಿತು. ಕಾಂಗ್ರೆಸ್ (ಐ) ಕಾಲದಲ್ಲಿ ನಡೆದಂತೆ ಅಧಿಕಾರದ ದುರಪಯೋಗ ನಡೆಯಲಾರಂಭಿಸಿತು. ಜಾತಿ, ಮತೀಯ ರಾಜಕೀಯ ಬೆಳೆಯಿತು.

1986ರ ಆರಂಭದಲ್ಲೇ ರಾಮಕೃಷ್ಣ ಹೆಗಡೆಯವರ ಸರ್ಕಾರವನ್ನು ನಡುಗಿಸಿದ "ಬಾಟ್ಲಿಂಗ್ ಪ್ರಕರಣ" ದ ಕುರಿತು ಹೈಕೋರ್ಟ್ ತೀರ್ಪು ಬಂತು. ರಾಮಕೃಷ್ಣ ಹೆಗ್ಗಡೆಯವರು "ವಿಧಾನ ಸಭೆಯಲ್ಲಿ ತೆಗೆದುಕೊಂಡ ನಿಲುವಿ"ಗನುಸಾರವಾಗಿ ರಾಜೀನಾಮೆ ಕೊಡಬೇಕಾಯಿತು, ರಾಜೀನಾಮೆ ಕೊಟ್ಟರು. ಆದರೆ ಆಮೇಲೆ ನಡೆದುದೇನು? "ಮೌಲ್ಯಾಧರಿತ ರಾಜಕೀಯ" ಕ್ಕೆ ತಿಲಾಂಜಲಿಯಿತ್ತ ನಾಟಕ.ವ್ಯಕ್ತಿನಿಷ್ಟೆ ರಾಜಕೀಯದ ಪುನರಾವತಾರವಾಯಿತು ರಾಮಕೃಷ್ಣ ಹೆಗಡೆಯವರ ರಾಜಕೀಯ. ಏನು ಕಣ್ಣೀರು ! ಏನು ಭಟ್ಟಂಗಿ ತನ !! ರಾಮಕೃಷ್ಣ ಹೆಗಡೆಯೇ ನಮ್ಮ ತಾಯಿ–ತಂದೆ,ಸರ್ವಸ್ವ. ಅವರು ಗದ್ದುಗೆಯಲ್ಲಿಲ್ಲದಿದ್ದರೆ ನಮ್ಮ ಜನತಾ ಪಕ್ಷದ ಆಡಳಿತೆಯೇ ಇಲ್ಲ !!! ....ಎಂಬ ಬೊಬ್ಬೆಯೇ ಬೊಬ್ಬೆ.ರಾಮಕೃಷ್ಣ ಹೆಗಡೆಯವರ ಹಠ. ಕೊನೆಗೆ ಜನತಾ ಪಕ್ಷ ಹೈಕಮಾಂಡ್ ನಿರ್ದೇಶನ ಮತ್ತು ಜನತಾ ಪಕ್ಷದವರ ಒತ್ತಡಕ್ಕೆ ನಾಟಕೀಯವಾಗಿ ಮಣಿದು ರಾಮಕೃಷ್ಣ ಹೆಗಡೆಯವರ ಪುನರಾಯ್ಕೆ ಮತ್ತು ಪುನಃ ಮುಖ್ಯಮಂತ್ರಿಯಾಗಿ ಮುಂದುವರಿಯುವಿಕೆ.

ರಾಜ್ಯದಲ್ಲಿ ಸತತವಾಗಿ 3ನೇ ವರ್ಷ ಬರಗಾಲದ ತಾಂಡವ ಈ ಕುರಿತು ಕೇಂದ್ರ ಸರಕಾರ ಮತ್ತು ಜನತಾ ಸರ್ಕಾರಗಳ ತೀವ್ರ ಅಸಡ್ಡೆ. ಬರಗಾಲ ಕಾಮಗಾರಿ ತೆರೆಯುವುದಕ್ಕಾಗಿ ಜನತೆಯ ಚಳುವಳಿ. ಬರಗಾಲ ಪರಿಹಾರ ಮೊದಗಿಸಲು ಸಿ. ಐ. ಟಿ. ಯು. ನೇತೃತ್ವದಲ್ಲಿ ಕಾರ್ಮಿಕರ ಕಾಣಿಕೆ.

ಜನತೆಯ ದೃಷ್ಟಿಯನ್ನು ಬೇರೆಡೆಗೆ ಒಯ್ಯಲು ಜನತಾ ಪಕ್ಷ ಮತ್ತು ಸರಕಾರವು 'ಸಂದರ್ಭವಾದಿ ರಾಜಕೀಯ' ಆರಂಭಿಸಿತು. ಕನ್ನಡ ಭಾಷೆಯ ಅಭಿಮಾನ ಒಮ್ಮೆಲೇ ಉಕ್ಕೇರಿ "ಎಲ್ಲಾ ಮಟ್ಟಗಳಲ್ಲಿ ಕನ್ನಡವನ್ನೇ ಬಳಸಬೇಕು; ಯಾವುದೇ ಅಧಿಕಾರಿ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೆ ಅವರನ್ನು ಅವಮಾನತು ಗೊಳಿಸುತ್ತೇನೆ" ಎಂದು ಗುಡುಗಿದರು ಶ್ರೀ ರಾಮಕೃಷ್ಣ ಹೆಗ್ಡೆ. "ಮಹಾಜನ್ ವರದಿಯನ್ನು ಅಕ್ಷರಶಃ ಪಾಲಿಸಬೇಕು; ಇಲ್ಲವಾದರೆ ರಕ್ತದ ಓಕುಳಿ ಹರಿದೀತು...." ಶ್ರೀಮಾನ್ ಪಾಟೀಲ ಪುಟ್ಟಪ್ಪನವರ ಆರ್ಭಟ. ಬೆಳಗಾಂನ ಚುನಾಯಿತ ಎಂ. ಇ. ಎಸ್. ಪೌರಾಡಳಿತವನ್ನು ಕಿತ್ತು ಹಾಕಿ, ಅದರ ಸ್ಥಾನದಲ್ಲಿ ಆಡಳಿತಾಧಿಕಾರಿಯನ್ನು ನೇಮಿಸಿರಿ"ಎಂದು ಘೋಷಣೆ ಹಾಕಿ ವಿಧಾನಸೌಧದ ಎದುರು ಉಪವಾಸ ಮತ್ತು ರಾಮಕೃಷ್ಣ ಹೆಗ್ಡೆಯವರ ಆಶ್ವಾಸನೆ, ಇದರ ಬೆನ್ನಿನಲ್ಲಿಯೇ ಕಾಂಗ್ರೆಸ್ಸು ಮತ್ತು ಜನತಾ ಪಕ್ಷಗಳ ಸ್ಥಾಪಿತ ಹಿತಾಸಕ್ತಿಗಳು ರೇಷ್ಮೆ ಉದ್ದಿಮೆ ಸೇರಿ ರಾಮನಗರದಲ್ಲಿ ಮತೀಯ ಗಲಭೆ, ದೊಂಬಿ.

ಹಿಂದುಳಿದ ವರ್ಗಗಳ ಆಯೋಗ

ಜನತಾ ಪಕ್ಷದ "ವಿವಿಧ ಜಾತಿಗಳ ಪರವಾಗಿ ಮಂತ್ರಿ ಮಂಡಲದಲ್ಲಿ ಸ್ಥಾನಗಳು ಸಿಗಬೇಕೆಂದು" ಮಹಾ ಮನವಿ– ಜನತಾ ಪಕ್ಷದ ಮುಖ್ಯಮಂತ್ರಿಗೆ. ರಾಮಕೃಷ್ಣ ಹೆಗ್ಡೆಗೆ ಕಾಯಿಲೆ. ರಾಜ್ಯದಲ್ಲಿ ಆಡಳಿತೆಯ ಸ್ಥಗಿತತೆ ಮತ್ತು ಅಸ್ಥಿರತೆ. ಪುನಃ ರಾಮಕೃಷ್ಣ ಹೆಗ್ಡೆಯವರ ಗದ್ದುಗೆಗೆ "ಜನತಾ ಪಕ್ಷದ ಒಳಗಿನಿಂದಲೇ ಪಿತೂರಿ." ಪುನಃ ಮಂತ್ರಿ ಮಂಡಲದ ಪುನರ್ರಚನೆಯ ನಾಟಕ. ಧಿಡೀರನೆ ಎಲ್ಲಾ ರಾಜ್ಯ ಖಾತೆಯ ಮಂತ್ರಿಗಳ (ಒಬ್ಬರನ್ನು ಬಿಟ್ಟು) ವಜಾ. ಚಿಕ್ಕದಾದ ಮಂತ್ರಿ ಮಂಡಲ ಎಲ್ಲಾ ಪ್ರಭೃತಿಗಳಿಗೆ – ಎಷ್ಟೇ ಆಪಾದನೆಗಳಿದ್ದರೂ – ಮಂತ್ರಿ ಮಂಡಲದಲ್ಲಿ ಸ್ಥಿರ ಸ್ಥಾನಗಳು. ದಕ್ಷತೆಗೆ ಮೂರು ಕಾಸಿನ ಬೆಲೆ !

ಈ ಕಸರತ್ತುಗಳ ಮಧ್ಯೆ ಯಾರಿಗೂ ಗೊತ್ತಾಗದಿರುವ ಕಾರಣಕ್ಕಾಗಿ "ಸರಕಾರ ವಿವರವಾಗಿ ಪರಿಶೀಲಿಸಿ, ನಿರ್ಧಾರಕ್ಕೆ ಬರುವ ಮೊದಲೇ" ಹಿಂದುಳಿದ ವರ್ಗಗಳ ಎರಡನೇ ಆಯೋಗದ ವರದಿಯ ಬಹಿರಂಗ ಬಿಡುಗಡೆ. ಅದರಲ್ಲಿ ಹಲವು ಹಿಂದುಳಿದ ಜಾತಿಗಳಿಗೆ ಸೇರಿ ಒಕ್ಕಲಿಗರಿಗೆ ಮೀಸಲಾತಿ ರದ್ದು ಮಾಡುವ ಶಿಫಾರಸು. ಒಡನೆ ರಾಜ್ಯದಲ್ಲಿ ಒಕ್ಕಲಿಗ ಸಂಘದ ನೇತೃತ್ವದಲ್ಲಿ ಚಳುವಳಿ. ರಾಸ್ತಾರೋಕೊ, ರೈಲ್ ರೋಕೊ,.... ಕಾಂಗ್ರೆಸ್ (ಐ), ಕಾಂಗ್ರೆಸ್ (ಐಜಿ) ಗಳ ಪ್ರತ್ಯೇಕ ಭಾಗವಹಿಸುವಿಕೆ ಮತ್ತು ಜನತಾ ಪಕ್ಷದ ಪ್ರಭೃತಿಗಳ ಭಾಗವಹಿಸುವಿಕೆ. ಜನತಾ ಮಂತ್ರಿಗಳ ಮತ್ತು ಶಾಸಕರ ರಾಜೀನಾಮೆ. ಅದೇ ವೇಳೆ "ಹಾವನೂರು ವರದಿ" ಶಿಫಾರಸು ಮೇರೆಗೆ ಮೀಸಲಾತಿ ಕಳೆದು ಕೊಂಡ ಲಿಂಗಾಯಿತರ ಚಳುವಳಿ. ರಾಮಕೃಷ್ಣ ಹೆಗ್ಡೆಯವರ ಲೆಕ್ಕಾಚಾರ ಬುಡಮೇಲು. 2 ತಿಂಗಳ ಕಾಲ ರಾಜ್ಯದಲ್ಲಿ ಹಲವಾರು ಜಿಲ್ಲೆಗಳಲ್ಲಿ ಆಡಳಿತೆಯ ಕುಸಿತ.

ಈ ಚಳುವಳಿಯು ಸ್ಪಷ್ಟವಾಗಿ ರಾಜ್ಯದ ಎರಡು ಪ್ರಮುಖ ಮುಂದುವರಿದ ಕೋಮುಗಳ ನೇತೃತ್ವದ ಚಳುವಳಿ, ಜನತಾ ಪಕ್ಷದವರೇ, ಯಾಕೆ ಮಂತ್ರಿಗಳೇ ಕೆಲವರು, ಸೇರಿ ನಡೆಸಿದ ಚಳುವಳಿ. ರಾಮಕೃಷ್ಣ ಹೆಗ್ಡೆಯವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ನಡಸಿದ ಚಳುವಳಿ.

ಆದರೂ ರಾಮಕೃಷ್ಣ ಹೆಗ್ಡೆಯವರು ಮುಖ್ಯಮಂತ್ರಿಯಾಗಿಯೇ ಉಳಿದರು ! ಹಿಂದುಳಿದ ವರ್ಗಗಳ ಎರಡನೇ ಆಯೋಗದ ವಿರುದ್ಧ ಚಳುವಳಿ ನಿಲುಗಡೆಯಾಯಿತು !

ಹಿಂದುಳಿದ ವರ್ಗಗಳ ಎರಡನೇ ಆಯೋಗದ ಶಿಫಾರಸುಗಳನ್ನೂ ಸಂಪೂರ್ಣವಾಗಿ ಗಾಳಿಗೆ ತೂರಿ ಮೌಲ್ಯಾಧಾರಿತ ರಾಜಕೀಯಕ್ಕೆ ತಿಲಾಂಜಲಿಯನ್ನಿತ್ತು ರಾಮಕೃಷ್ಣ ಹೆಗ್ಗಡೆಯವರ ಅಧಿಕಾರ ಮುಂದುವರೆಯಿತು.

ರಾಜ್ಯದ ಶೇ 92 ಜನತೆಯನ್ನೂ ರಾಮಕೃಷ್ಣ ಹೆಗ್ಗಡೆಯವರ ಸರಕಾರವು "ಹಿಂದುಳಿದ ವರ್ಗಗಳಿಗೆ ಸೇರಿಸಿದರು"

[8ನೇ ಪುಟ ನೋಡಿ]

ಜನವರಿ 21 ರ ಮುಷ್ಕರ ಯಶಸ್ವಿಗೊಳಿಸಿ

ಸಾರ್ವಜನಿಕ ಕ್ಷೇತ್ರದ ನೌಕರರ ಸಮಾವೇಶ ಜನವರಿ 1ರಂದು ಬೆಂಗಳೂರಿನ ಪುರಭವನದಲ್ಲಿ ನಡೆಯಿತು. ಸಿ.ಐ.ಟಿ.ಯು. ಎ.ಐ. ಟಿ. ಯು. ಸಿ. ಬಿ.ಎಂ.ಎಸ್.,ಹೆಚ್.ಎಂ.ಎಸ್.ಎಚ್ ಎಂ.ಕೆ.ಪಿ. ಮತ್ತು ಜೆ.ಎ.ಎಫ್.ನ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು ಅಲ್ಲದೆ ಬ್ಯಾಂಕು, ಜೀವ ವಿಮಾ ನೌಕರರ ಸಂಘಗಳ ಪ್ರತಿನಿಧಿಗಳೂ ಸಹ ಪಾಲ್ಗೊಂಡಿದ್ದರು.ಅಕ್ಟೋಬರ್ 20, 27 ರಂದು ದೆಹಲಿಯಲ್ಲಿ ನಡೆದ ಸಮಾವೇಶ ಅಂಗೀಕರಿಸಿದ 14 ಅಂಶದ ಪ್ರಣಾಳಿಕೆಯನ್ನು ಸಮಾವೇಶ ಸ್ಥಿರೀಕರಿಸಿತು. ಮತ್ತು ಜನವರಿ 1[illegible] ರಾಷ್ಟ್ರವ್ಯಾಪೀ ಮುಷ್ಕರವನ್ನು ರಾಜ್ಯದಲ್ಲಿ ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ಮುಷ್ಕರಕ್ಕೆ ಇತರೆ ನೌಕರರೂ ಸಹ ಸೌಹಾರ್ಧ ಬೆಂಬಲ ನೀಡಬೇಕೆಂದು ಮನವಿ ಮಾಡಿಕೊಂಡಿದೆ.

ಸಮಾವೇಶದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರಾದ ಎಸ್. ಸೂರ್ಯನಾರಾಯಣರಾವ್ [ಸಿ.ಐ.ಟಿ ಯು.] ಕಾ. ಎಂ.ಸಿ. ನರಸಿಂಹನ್; ಕಾ. ಎಂ. ಎಸ್. ಕೃಷ್ಣನ್ [ಎ.ಐ. ಟಿ.ಯು.ಸಿ.] ಶ್ವೇತಾದ್ರಿ [ಬಿ.ಎಂ. ಎಸ್.] ಪಿ. ರಾಮದೇವ್ [ಎಚ್. ಎಂ.ಎಸ್.] ಮೈಕೆಲ್ ಫರ್ನಾಂಡಿಸ್ [ಹೆಚ್. ಎಂ.ಕೆ.ಪಿ.] ಕಾ. ರೇವಣ್ಣ [BEFI], ಅಮಾನುಲ್ಲಾಖಾನ್ [LIC ನೌಕರರರ ಸಂಘ] ಕೆ.ಬಿ. ಗೌಡ, [JAF] ಮುಂತಾದವರು ಭಾಗವಹಿಸಿದರು.

ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಕಾ. ಸೂರಿಯವರು ದೇಶದ ಕಾರ್ಮಿಕರ ವರ್ಗವು ಮೊದಲನೆಯ ಕೇಂದ್ರ ಸರ್ಕಾರದ ಸಾರ್ವಜನಿಕಕ್ಷೇತ್ರವನ್ನು ಖಾಸಗೀಕರಣ ಗೊಳಿಸಬೇಕೆಂಬ ನೀತಿಯ ವಿರುದ್ಧ ಒಗ್ಗಟ್ಟಿನಿಂದ ಹೋರಾಟಕ್ಕೆ ಮುನ್ನುಗ್ಗಿರುವುದು ಮಹತ್ವದ ರಾಜಕೀಯ ಹೆಜ್ಜೆ ಎಂಬುದಾಗಿ ತಿಳಿಸಿದರು. ಸಾರ್ವಜನಿಕ ಕ್ಷೇತ್ರವನ್ನು ಬಲಪಡಿಸದೆ ಅದನ್ನು ವಿಸ್ತಾರಗೊಳಿಸದೆ ದೇಶದ ಅಲಿಪ್ತ ನೀತಿಯನ್ನು ಕೂಡ ಸಮರ್ಪಕವಾಗಿ ಕಾಪಾಡಿಕೊಳ್ಳಲಾಗುವುದಿಲ್ಲವೆಂದೂ, ರಾಜೀವ ಗಾಂಧಿಯವರ ಹೊಸ ಆರ್ಥಿಕ ನೀತಿಯ ವಿರುದ್ಧದ ಹೋರಾಟ, ದೇಶದ ಸ್ವಾತಂತ್ರ್ಯವನ್ನು ಬಲಪಡಿಸುವ ಹೋರಾಟವಾಗುತ್ತದೆಂದು ಅವರು ಹೇಳಿದರು.

ಕಾ. ಎಂ.ಎಸ್. ಕೃಷ್ಣನ್ ಅವರು ಮಾತನಾಡುತ್ತಾ ರಾಜೀವ ಗಾಂಧಿಯವರ ಧೋರಣೆ, ದೇಶದ ಅಭಿವೃದ್ಧಿಗೆ, ಕೈಗಾರಿಕಾ ಬೆಳವಣಿಗೆಗೆ ಧಕ್ಕೆಯುಂಟು ಮಾಡುತ್ತದೆಂದು ತಿಳಿಸಿದರು.

ಸಮಾವೇಶವನ್ನುದ್ದೇಶಿಸಿ ಇತರ ಅನೇಕ ಸಂಘಟನೆಗಳ ಮುಖಂಡರುಗಳು ಮಾತನಾಡಿದರು. ○

ವಸತಿಗಾಗಿ ಬೀಡಿ ಕಾರ್ಮಿಕರ ಹೋರಾಟ

ಮೈಸೂರು ಜಿಲ್ಲೆಯ ಚಾಮರಾಜನಗರದಲ್ಲಿ ಬೀಡಿಕಾರ್ಮಿಕರಿಗಾಗಿ 425 ಮನೆಗಳನ್ನು ಬೀಡಿ ಕಾರ್ಮಿಕರ ಕಲ್ಯಾಣನಿಧಿ ಮತ್ತು ಕೇಂದ್ರ ಸರ್ಕಾರದ ಹಣಸಹಾಯದಿಂದಕಟ್ಟಲಾಗಿದ್ದು ಅವುಗಳ ವಿತರಣೆಯಲ್ಲಿ ಕೆಲವು ಮಧ್ಯವರ್ತಿಗಳ ಕೈವಾಡದಿಂದಾಗಿ ಸಿ. ಐ. ಟಿ. ಯುಗೆ ಸೇರಿದ ಬೀಡಿಕಾರ್ಮಿಕರ ಸಂಘ ನಡೆಸಿದ ಹೋರಾಟದ ಫಲವಾಗಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಪರಿಶೀಲಸಲು ಸಮಿತಿಯನ್ನು ರಚಿಸಲಾಯಿತು. ಅರ್ಜಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದ ಸಮಿತಿಯು ಸಿ ಐ.ಟಿ.ಯು. ಸಂಘವು ಮಾಡಿರುವ ಆಪಾದನೆಗಳನ್ನು ಸ್ಪಷ್ಟೀಕರಿಸಿ ಸರಕಾರಕ್ಕೆ ವರದಿ ಮಾಡಿದೆ. 425 ಅರ್ಜಿಗಳಲ್ಲಿ 325ಕ್ಕೂ ಹೆಚ್ಚು ಅರ್ಜಿದಾರರು ಮನೆ ಪಡೆಯಲು ಅನರ್ಹರೆಂಬುದಾಗಿ ಸಮಿತಿಯು ನಡೆಸಿದ ಪರಿಶೀಲನೆಯಿಂದ ಸಾಬೀತಾಗಿದೆ. ಸಹಸ್ರಾರು ಕಾರ್ಮಿಕರಿರುವ ಚಾಮರಾಜನಗರದಲ್ಲಿ ಬಹುಪಾಲು ವಸತಿ ಹೀನರೇ ಇರುವಾಗ 425 ಮನೆಗಳಿಗೆ ಸರಿಯಾಗಿ 425 ಅರ್ಜಿಗಳು ಬಂದಿರುವುದು ಯಾರ ಕೈವಾಡದಿಂದ ? ಅರ್ಜಿದಾರರ ಪೈಕಿ ಅನೇಕರು ಬೀಡಿ ಕಾರ್ಮಿಕರೇ ಅಲ್ಲ. ಆದರೂ ಅವರ ಅರ್ಜಿಗಳಿಗೆ ಬೀಡಿ ಕಂಟ್ರಾಕ್ಟರುಗಳ ಹಾಗೂ ಕಾರ್ಮಿಕ ಅಧಿಕಾರಿಗಳ ಸಹಿ ಇದೆ. ಇದು ಹೇಗೆ ? ಅರ್ಜಿದಾರರಲ್ಲಿ ಮಾಜಿ ವಿ. ಪಿ. ಚೇರ್ಮನ್ನರು, ಹೋಟೆಲ್ ಮಾಲೀಕರು, ವ್ಯಾಪಾರಿಗಳು, ಬೀಡಿ ಕಂಟ್ರಾಕ್ಟರುಗಳ ಸಂಬಂಧಿಕರು ಸೇರಿದ್ದಾರೆ. ಇದು ಯಾರ ಕುಮ್ಮಕ್ಕಿನಿಂದ ?

ಅಜೀಜ್ ಸೇಠ್‌ರವರ ಅನುಯಾಯಿಯಾದ ಜಮೀಲ್. ಎಂಬಾತ ಸಂಘವೊಂದನ್ನು ಕಟ್ಟಿಕೊಂಡು ಬಡ ಕಾರ್ಮಿಕರಿಂದಲೂ ಅರ್ಹತೆಯಿಲ್ಲದವರಿಂದಲೂ ಮನೆಯ ಆಸೆ ತೋರಿಸಿ ತಲಾ 100 ರಿಂದ 500 ರವರೆಗೆ ಹಣ ವಸೂಲು ಮಾಡಿ ಲಕ್ಷಾಂತರ ರೂಪಾಯಿ ಲಪಟಾಯಿಸಿದ್ದಾನೆ. ಜನತಾ ಪಕ್ಷದ ಮುಖಂಡರು ಬಂದಾಗ ಕಾರಿಗೆ ಜನತಾ ಪಾರ್ಟಿಯ ಬಾವುಟ ಸಿಕ್ಕಿಸಿಕೊಂಡು ತಿರುಗಾಡುತ್ತಿರುತ್ತಾನೆ. ಈತನ ಬಗ್ಗೆ ಅಧಿಕಾರಿಗಳಿಗೂ ಮಂತ್ರಿಗಳಿಗೂ ಅನೇಕ ದೂರುಗಳು ಹೋಗಿದ್ದರೂ. ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಬೀಡಿ ಕಾರ್ಮಿಕರ ಸಂಘ ಈ ಬಗ್ಗೆ ಸತತವಾಗಿ ಹೋರಾಟ ನಡೆಸುತ್ತಿದೆ. ಅರ್ಹ ಬೀಡಿ ಕಾರ್ಮಿಕರಿಂದ ಮಾತ್ರವೇ ಅರ್ಜಿಗಳನ್ನು ಕರೆಯಬೇಕು, ಮಧ್ಯವರ್ತಿಗಳನ್ನು ದೂರ ಇಡಬೇಕು, ಬೀಡಿ ಕಾರ್ಮಿಕರ ಸೇವಾ ಹಿರಿತನವನ್ನು ಗಣನೆಗೆ ತೆಗೆದುಕೊಳ್ಳಬೇಕು, ಕುಟುಂಬದ ಒಟ್ಟು ಆದಾಯವನ್ನು ಪರಿಗಣಿಸಬೇಕು ಎಂಬ ಬೇಡಿಕೆಗಳನ್ನು ಅದು ಮುಂದಿಟ್ಟಿದೆ.

ಮನೆ ಹಂಚಿಕೆಯ ಸಮಿತಿಯು 1986 ರ ಅಕ್ಟೋಬರ್‌ನಲ್ಲೇ ಸರಕಾರಕ್ಕೆ ವರದಿ ಕಳುಹಿಸಿ ಮುಂದಿನ ಕ್ರಮದ ಬಗ್ಗೆ ಶಿಫಾರಸು ಮಾಡಿದ್ದಾಗ್ಯೂ ಸರ್ಕಾರವು ಇದುವರೆವಿಗೂ ಸೂಕ್ತ ಆಜ್ಞೆ ಹೊರಡಿಸದೇ ಇರುವುದು ಬಡ ಕಾರ್ಮಿಕರ ಕುರಿತಾದ ಸರಕಾರದ ಕಳಕಳಿಯ ಬಗ್ಗೆ ಸಂದೇಹ ಮೂಡಿಸುತ್ತಿದೆ.

-ಜಿ. ಎಸ್. ನಾಗರಾಜ್

ಸಾರ್ವಜನಿಕ ಉದ್ದಿಮೆಯನ್ನು ಹೆಳವನಾಗಿಸುವ ಈ ಕಥೆ

ಕಾಮಧೇನುವನ್ನೇ ಕೊಲ್ಲಲೆತ್ತಿಸಿದಂತೆ

ಕೇಳೀರೇನರಿ ಕಥೆಯ ಕೇಳೀರೇನು, ಚೆನ್ನಾಗಿ ಸಾಕಿದರೆ ಹಂಡೆ ತುಂಬಾ ಹಾಲು ಕೊಡುವ ಕಾಮಧೇನುವನ್ನೇ ಹೊರಗಟ್ಟುವ ಕಥೆಯನ್ನು ಕೇಳಿದ್ದೀರೇನು ? ಕೇಳಿಲ್ಲವೇ ? ಈಗ ಕೇಳಿ. ಇದು ಅಂತಿಂಥಾ ಕಥೆಯಲ್ಲ. ನಮ್ಮ ನಿಮ್ಮೆಲ್ಲರನ್ನೂ ಕಾಡುತ್ತಿರುವ ಹೆಡ್ಡರ ಕಥೆ.

ನಮ್ಮ ದೇಶದಲ್ಲಿ ಹಿಂದೆಯೂ ಇದ್ದರು. ಈಗಲೂ ಇದ್ದಾರೆ. ದಿನೇ ದಿನೇ ಈ ಆಧುನಿಕ ಕಾಳಿದಾಸರ ಸಂತತಿ, ಕಾಳಿದಾಸ ಕವಿ ಆಗುವುದಕ್ಕೆ ಮೊದಲಿನ ಅವಸ್ಥೆಯ ಹೆಡ್ಡರ ಸಂತತಿ ಬೆಳೆಯುತ್ತಿದೆ ಸ್ವಾಮಿ. ಇವರು ಅಂತಿಂಥಾಹೆಡ್ಡರಲ್ಲ ನಮ್ಮ ನಿಮ್ಮಂತಾವರನ್ನು ದಡ್ಡರನ್ನಾಗಿ ಮಾಡಿದ, ಮಾಡುತ್ತಿರುವ ಅತಿಬುದ್ಧಿವಂತರು ಸ್ವಾಮಿ. ಅಂತಹ ಒಂದು ಕಥೆ

ಒಂದೂರಿನಲ್ಲಿ ಒಂದು ಕುಟುಂಬ. ಒಂದು ದೊಡ್ಡ ಕುಟುಂಬ, ಜಂಟಿ ಕುಟುಂಬ, ಒಟ್ಟು ಕುಟುಂಬ ಅನ್ನುತ್ತಾರಲ್ಲಾ ಅಂತ ಕುಟುಂಬ. ಯಜಮಾನನೆಂಬುವನಿಗೇ ಎಷ್ಟು ಎಂಬುದು ಲೆಕ್ಕಸಿಗದಷ್ಟು ಮಂದಿ ಮನೆಯಲ್ಲಿ. ಇಂತಹ ಮನೆಯ ಜೀತದಲ್ಲಿತ್ತು ಸ್ವಾಮಿ ಮನೆಯ ಯಜಮಾನನಾಗಿ ಎಲ್ಲರೂ ನೆರೆಯೂರಿನ, ದೊರೆಯಂತೆಯೇ ದರ್ಬಾರು ಮಾಡುತ್ತಿದ್ದವನೊಬ್ಬನ ಅರಮನೆಯಂಥ ಮನೆಯಲ್ಲಿ ಜೀತ ಮಾಡುತ್ತಿದ್ದರು. ಸಂಕಟದಲ್ಲಿ ಒದ್ದಾಡುತ್ತಿದ್ದರು.

ನಮ್ಮ ದೇಶ ಸ್ವತಂತ್ರವಾಯಿತಲ್ಲ ಸರಿ ಸುಮಾರು ಅದೇ ಸಮಯಕ್ಕೆ ಈ ಕುಟುಂಬವೂ ಹೊಡೆದಾಡಿ ಬಡಿದಾಡಿ ಜೀತ ವಿಮುಕ್ತವಾಯಿತು. ತನ್ನ ಮೇಲೆ ಹೇರಿಕೊಂಡು ಕುಳಿತಿದ್ದ ಧಣಿಗೆ ಒತ್ತೆ ಹಾಕಿದ್ದ ಭೂಮಿಯನ್ನು ಬಿಡಿಸಿಕೊಂಡಿತು. ಆದರೆ ಧಣಿಯನ್ನು ನೋಡಿ ಕಲಿತಿದ್ದ ಪಾಠವನ್ನು ಪ್ರಯೋಗಿಸಿದ ಹೊಸ ಯಜಮಾನ ಕುಟುಂಬದ ಭೂಮಿಯನ್ನು ಗುಟ್ಟಾಗಿ ತನ್ನ ಹೆಸರಿನಲ್ಲಿ ಭದ್ರ ಮಾಡಿದ ಆದು ಖಾಯಂ ಆಗಬೇಕಾದರೆ ತನ್ನ ಮನೆಯ ಜೀವನದ ಪರಿಸ್ಥಿತಿ ಸುಧಾರ್ಸೋದು ಹ್ಯಾಗೆ ಅಂತ ಯೋಚನೆ ಶುರು ಮಾಡ್ದ.ಅವನ ಹಿಂದಿನಧಣೀ ಮನೆಯವರು ಹೆಂಗೆ ಸುಖದ ಸುಪ್ಪತ್ತಿಗೆಯಲ್ಲಿದ್ದರು ಅನ್ನೋದನ್ನ ನೆನಸಿಕೊಂಡ. ಅವರ ಮನೆಯಲ್ಲಿ ಇದ್ದಂತ ಹಿಂಡು ಹಿಂಡು ಆಕಳ, ಅವನ ಕಣ್ಣ ಮುಂದೆ ಬಂತು. ಹೆಂಗಿದ್ರೂ ಮನೆ ಮಂದಿಗೆಲ್ಲಾ ಅವುಗಳ ಕಸಬಳಿದು ಹುಲ್ಲು ಮೇಯಿಸಿ ಸೇವೆ ಎಲ್ಲಾ ಮಾಡಿ ಚೆನ್ನಾಗಿ ಗೊತ್ತಿದೆ. ಅದೇ ಸರಿ ಅಂತ ತಿರ್ಮಾನ ಮಾಡಿದ.

ಸರಿ, ಆ ಯೋಚನೆ ಬಂದಿದ್ದೇ ತಡ ಎದ್ದು ಹಿಂದಿನ ಧಣಿ ಮನೆಗೆ ಹೊರಟ. "ನಿಮ್ಮ ಹಸುಗಳಲ್ಲಿ ನಂಗೂ ಒಂದೆರಡು ಕೊಡಿ ಸ್ವಾಮಿ.ಸಾಕ್ಕೊಂಡು ಹೆಂಗೋ ಒಡವ ಬದಿಕ್ಕೊಂತೀನಿ" ಅಂತ ಅಂಗಲಾಚಿ ಕೇಳಿದ. ಧಣಿ ಹರಾ ಅನ್ಲಿಲ್ಲ, ಶಿವಾ ಅನ್ಲಿಲ್ಲ. ಅವನಿಗೆ ಈಗ ಕರುಣೆ ಬಂದೀತೂ ಆಗ ಬಂದೀತು ಅಂತ ಬಾಗಿಲು ಕಾದ. ಯಾವ ಫಲ ಕಾಣ್ಲಿಲ್ಲ ಧಣಿ ಯೋಚನೇನೆ ಬೇರೆ ಇತ್ತು ಅವನು ಒಂತರಾ ನಮ್ಮ ದೇಶಾನೆ ಹಿಡಿಕೊಂಡಿದ್ದ ದೊಡ್ಡ ಧಣಿಗಳ ತರಾನೆ. ಹೆಂಗಿದ್ರು ಅವನ ಮನೇಲಿ ಹಸು ಇಲ್ಲ. ಆದರೆ ಮನೆ ತುಂಬಾ ಜನ ಅವರೆ. ಅವರಿಗೆ ಹಾಲು, ಪಾಲು ಬೇಕಾಗದೆ ಇದ್ದೀತ. ಬೇಕಾದಾಗ ನನ್ನತ್ರಾನೆ ಬಂದು ಕೊಂಡ್ಕೊಂಡಾರು. ಬೇರೆ ಎಲ್ಲಿ ಹೋಗಕ್ಕೆ ಸಾಧ್ಯ.ಬಂದಾಗ ಸರಿಯಾಗಿ ಹಿಂಡಿದರಾಯಿತು. ಅಂತ ಅವನ ಲೆಕ್ಕ. ಆದರೇನ್ಮಾಡೋದು ಊರು ಅಂದ್ಮೇಲೆ ಅವನೊಬ್ಬನೇ ಇದ್ದಾನ. ಬೇರೆಯವರ ಕಷ್ಟ ಸುಖಕ್ಕೆ ಆಗಬೇಕು ಅನ್ನೊ ಜನ ಇರೊದೇ ಇಲ್ವ ಅವರೂ ಇದ್ದರು ಎಲ್ಲರಿಗಿಂತ. ಮೊದಲಾಗಿ, ಎಲ್ಲಾ ತರದ ಜೀತಾನ, ಮನೆಯ ಹೊರಗಿನ ಜೀತ ಮಾತ್ರವಲ್ಲ ಒಳಗಿನ ಜೀತಾನ ಕೂಡ ಬಿಡಿಸಿಕೊಂಡ ಜನ ಇದ್ದರು. ಅವರನ್ನ ಕಮ್ಯುನಿಸ್ಟ ಮಂದಿ ಈ ಧಣಿಗಳೆಲ್ಲಾ ದೂರ ಇಟ್ಟಿದ್ರು ಅವರ ಹತ್ರ ಆಕಳು ಮಾತ್ರ ಅಲ್ಲ ಕಾಮಧೇನುವೇ ಇತ್ತು.ಅದರ ಕರುಗಳನ್ನ ಕೊಡೋದಕ್ಕೆ ಅವರುತಯಾರಾಗಿದ್ರೂ ಕೂಡ.ಜೀತ ಮಾಡ್ತಿದ್ದ ಮನೆ ತಂಗಳೂಟ ತಿಂದು ಪಳಗಿನೋನಿಗೆ ಬಿಸಿ ಬಿಸಿ ಅನ್ನ ಸಾರು ಕಹಿಯಾಗಿ ಕಂಡಿತ್ತು.

ಆದರೇನು ಮಾಡೋದು.ಹಳೇ ಧಣಿ ಎಕ್ಕಡ ಕಾದೂ ಕಾದು ಸಾಕಾದ ಮೇಲೆ ಅವನ ಕಣ್ಣಿಗೆ ಕಾಮಧೇನ್ನು ಕಾಣಿಸಿದ್ದು. ಅವನ ಕಾಲು ಅದನ್ನು ಸಾಕುತ್ತಾ ಇದ್ದವರ ಮನೆ ಕಡೆಗೆ ಹೆಜ್ಜೆ ಹಾಕ್ತು. ಅವರು ನಮ್ಮ ಈ ಯಜಮಾನಂಗೆ ಕಾ ಮ ಧೇ ನು ಕೊಟ್ಟಿದ್ದು ಇವನ ಮನೇಲಿ ಈ ಕಾಮಧೇನು ನೂರಾರು ಕರು ಹಾಕಿದ್ದು ಇವೆಲ್ಲಾ ಈಗ ಹಳೇ ಕಥೆ.

ಕಾಮಧೇನುವನ್ನ ಹೊಡಕೊಂಡು ಬಂದ ಮೇಲೆ ಬೇರೇವರ ಮನೆಗೆ ಹಾಲಿಗಾಗಿ ತಿರಿಯೋದು ತಪ್ಪಿತು. ಇದರಿಂದ ಮನೆ ಯಜಮಾನ ಸ್ವಲ್ಪ ತಲೆಯೆತ್ತಿಕೊಂಡು ತಿರುಗೊದಿಕ್ಕೆ ಸಾಧ್ಯ ಆಯಿತು. ಸ್ವಲ್ಪ ಧೈರ್ಯ ಕುದುರಿತು. ತನ್ನಂತೆಯೇ ಹೊಸದಾಗಿ ಜೀತವಿಮುಕ್ತರಾದವರ ಜೊತೆ ಸೇರಿ ಅಲಿಪ್ತಕೂಟ ಮಾಡಿ ಹಳೇ ಧಣಿಗಳಿಗೆ ಆಗಾಗ ಎದುರು ಬೀಳೋದಿಕ್ಕೆ ಶುರುಮಾಡಿದ. ಹಾಲು ಕೇಳುವುದು ಬಿಟ್ಟ ಎಂದರೆ ಉಳಿದ ಅಕ್ಕಿ ಧಾನ್ಯ ಬಟ್ಟೆ ಇವಕ್ಕೇನು ಮಾಡಬೇಕು ? ಅದಕ್ಕಾಗಿ ಆಗಾಗ ಕೈಚಾಚುವುದು ಇದ್ದೇ ಇತ್ತು. ಆಗ ಈ ಹಳೇ ಧಣಿಗಳ ಕೂಟ ಇವನಿಗೆ ಮೂಗುದಾರ ಹಾಕಲು ಕಾಯುತ್ತಲೇ ಇದ್ದರು. ಸ್ವಲ್ಪ ಪರಿಸ್ಥಿತಿ ಯಾವಾಗ ಸುಧಾರಿಸ್'ತೋ ಆಗ ನಮ್ಮ ಕಥಾ ನಾಯಕ, ಯಜಮಾನ, ಯಾವಾಗಲೂ ಪಟ್ಟಾಂಗ ಹೊಡಕೊಂಡು ಕೆಲಸ ಮಾಡೊದನ್ನೇ ಕೈಬಿಟ್ಟ. ಇವನು ಮಾತ್ರ ಅಲ್ಲ. ಇವನಿಗೆ ಪರಾಕು ಹೇಳೋರು, ಇವನು ಹೇಳಿದ್ದಕ್ಕೆಲ್ಲಾ ಹೂಂಗುಟ್ಟೋರು ಎಲ್ಲರೂ ಕೆಲಸ ಮಾಡೋದು ಕೈಬಿಟ್ಟರು.ಆದರೆ ಕಾಮಧೇನುವಿನಿಂದ ಬಂದಂತ ಹಾಲು, ಮೊಸರು, ಬೆಣ್ಣೆ, ತುಪ್ಪ ಎಲ್ಲಾ ಇವನಿಗೆ.ಇವನ ಸುತ್ತಾ ಕುಂತು ಪಟ್ಟಾಂಗ ಹೊಡೆಯೋರಿಗೆ. ಅದರ ಜೊತೆಗೆ ಇವನ ಹೆಂಡತಿ, ಇವನ ಅಚ್ಚುಮೆಚ್ಚಿನ

(6ನೇ ಪುಟ ನೋಡಿ)

ಈ ಕಾಮಧೇನುವನ್ನು ಸಾಕಿ ಅದರ ಕಸ ಬಳಿದು ಹಿಂಡಿ ಹಾಕಿ ಸಲಹಿದವರಿಗೆ ಅವರ ಕರುಳನ್ನೇ ಕತ್ತರಿಸಿದಂತಾಗುತ್ತಿದೆ. ರೋಷ ಏರುತ್ತಿದೆ. ಅವರು ನಿಮ್ಮ ಸುಳ್ಳುಗಳನ್ನು ಹರಿದು ಚಿಂದಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಜನವರಿ21 ಕೇವಲ ನಾಂದಿಯಷ್ಟೇ.

ವಿಶ್ವ ಬ್ಯಾಂಕ್ ಪ್ರಭುಗಳ ಹುಕುಮಿಗೆ ಜೀ ಎಂದ

ಸೆನ್ ಗುಪ್ತ ವರದಿ

ದಿವಂಗತ ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರ ಅಭಿಪ್ರಾಯದ ಪ್ರಕಾರ ಭಾರತ ಸರ್ಕಾರ ಸಾರ್ವಜನಿಕ ಉದ್ದಿಮೆಗಳನ್ನು ಕುರಿತಾದ ರಾಷ್ಟ್ರೀಯ ಧೋರಣೆಯನ್ನು ವಿಮರ್ಶಿಸಲು ಒಂದು ಸಮಿತಿ ನೇಮಿಸಲು ನಿರ್ಧರಿಸಿತು. 21 ಸೆಪ್ಟಂಬರ್ 1984ರಲ್ಲಿ ನೇಮಿಸಲ್ಪಟ್ಟ ಈ ಸಮಿತಿಯ ಅಧ್ಯಕ್ಷ ಡಾ. ಅರ್ಜುನ್‌ಸೆನ್‌ಗುಪ್ತಾ ಪ್ರಧಾನಮಂತ್ರಿಗಳ ವಿಶೇಷ ಆಪ್ತ ಕಾರ್ಯದರ್ಶಿಗಳಾಗಿದ್ದರು.ಇವರಲ್ಲದೆ ಕೇಂದ್ರ ಸರ್ಕಾರದ ಎಂಟು ಪ್ರತಿನಿಧಿಗಳಿದ್ದರು. ಕಾರ್ಮಿಕರಿಗೂ ಇದು ಮಹತ್ವದ ಪ್ರಶ್ನೆಯಾಗಿದ್ದರೂ ಒಬ್ಬನೇ ಒಬ್ಬ ಕಾರ್ಮಿಕ ಪ್ರತಿನಿಧಿಯೂ ಈ ಸಮಿತಿಯಲ್ಲಿರಲಿಲ್ಲ.

ಈ ಸಮಿತಿ 3 ತಿಂಗಳೊಳಗೆ ತನ್ನ ವರದಿಯನ್ನು ಸಲ್ಲಿಸಬೇಕಾಗಿತ್ತು: ಈ ನಡುವೆ ಇಂದಿರಾ ಗಾಂಧಿಯವರ ಕೊಲೆಯಿಂದಾಗಿ ಸುಮಾರು ಒಂದು ತಿಂಗಳು ಏನೂ ಕಾರ್ಯಕಲಾಪ ನಡೆಸದಿದ್ದರೂ ಡಿಸೆಂಬರ್ 31, 1984 ರಂದು ಈ ಸಮಿತಿ ತನ್ನ ವರದಿ ಸಲ್ಲಿಸಿತು. ಅಂದರೆ ಕೇವಲ ಎರಡು ತಿಂಗಳಲ್ಲಿ ಇಷ್ಟೊಂದು ಮಹತ್ವದ, ಕ್ಲಿಷ್ಟವಾದ ಪ್ರಶ್ನೆಯ ಕುರಿತು ವಿಮರ್ಶಿಸಿ ಈ ಸಮಿತಿ ಶಿಫಾರಸುಗಳನ್ನು ನೀಡಿತು ! ಈ ಶಿಫಾರಸುಗಳನ್ನು ಮೊದಲೇ ನಿರ್ಧರಿಸಿ, ಅದಕ್ಕೆ ಒಂದು ಅಧಿಕೃತ ರೂಪ ಕೊಡಲಷ್ಟೇ ಈ ಸಮಿತಿಯನ್ನು ನೇಮಿಸಿದಂತೆ ಕಾಣುವುದಿಲ್ಲವೇ ?

ಈ ವರದಿ ಸಲ್ಲಿಸಿದ ತಕ್ಷಣವೇ ಡಾ. ಸೆನ್ ಗುಪ್ತಾ ವಿಶ್ವಬ್ಯಾಂಕಿನಲ್ಲಿ ಒಂದು ಹುದ್ದೆ ಪಡೆದು ವಿದೇಶಕ್ಕೆ ಹಾರಿದರು.

ಈ ಸಮಿತಿಯು ಮುಖ್ಯ ಶಿಫಾರಸುಗಳೇನು ?

1 ಮೊದಲನೆಯದಾಗಿ, ಇದು ಉದ್ದಿಮೆಗಳನ್ನು ಎರಡು ವಲಯಗಳಾಗಿ ವಿಂಗಡಿಸುತ್ತದೆ. ಒಂದು ಮೂಲವಲಯ, ಇಷ್ಟೊಂದು ಮೂಲವಲ್ಲದ ವಲಯ. ಕಲ್ಲಿದ್ದಲು, ಲಿಗ್ನೈಟ್, ಕಚ್ಚಾತೈಲ, ಪೆಟ್ರೋಲಿಯಂ, ಪ್ರಾಕೃತಿಕ ಅನಿಲ, ವಿದ್ಯುತ್, ಪ್ರಾಥಮಿಕ ಉಕ್ಕು, ಅಲ್ಯೂಮಿನಿಯಂ, ತಾಮ್ರ, ಸೀಸ, ಸತು ಹಾಗೂ ನಿಕ್ಕಲ್ ಉತ್ಪಾದನೆ, ಪ್ರಾಥಮಿಕ ಪೆಟ್ರೊಕೆಮಿಕಲ್, ಉತ್ಪಾದನೆಗಳು ಹಾಗೂ ರಸಗೊಬ್ಬರ ಮಾತ್ರ ಮೂಲ ವಲಯಕ್ಕೆ ಸೇರಿದರೆ ಉಳಿದವೆಲ್ಲಾ ಮೂಲವಲ್ಲದ ವಲಯಗಳು.

2 ನಮ್ಮ ಯೋಜನಾ ಪ್ರಕ್ರಿಯೆ ಈ ಮೂಲ ವಲಯದ ಕೈಗಾರಿಕೆಗಳಿಗೆ ಸೀಮಿತಗೊಳ್ಳಬೇಕು. ಇತರ ಕೈಗಾರಿಕೆಗಳಿಗೆ ಖಾಸಗೀ ವಲಯಕ್ಕೆ ನೀಡುವಷ್ಟು ಮಹತ್ವ ನೀಡಿದರೆ ಸಾಕು. ಸಾರ್ವಜನಿಕ ವಲಯದ ಉದ್ದಿಮೆಗಳ ನಿರ್ವಹಣೆಯನ್ನು ಪಾಶ್ಚಿಮಾತ್ಯ ಬಂಡವಾಳಶಾಹಿ ಕಂಪೆನಿಗಳ ಮಾದರಿಯಲ್ಲಿ ಪುನರ್ರಚಿಸಿದರೆ ಎಲ್ಲವೂ ಸರಿಹೋಗುತ್ತದೆ ಎಂಬುದು ಈ ಸಮಿತಿಯ ಅಭಿಪ್ರಾಯ.

3 ಈ ಉದ್ದಿಮೆಗಳ ದಿನ ನಿತ್ಯದ ಚಟುವಟಿಕೆಗಳನ್ನು ಇವುಗಳ ಬಗ್ಗೆ ಸಂಸತ್ತಿನಲ್ಲಿ ಪ್ರಶ್ನೆ ಕೇಳ ಬಾರದು ಚರ್ಚೆ ನಡೆಸಬಾರದು ವಿಮರ್ಶಿಸಬಾರದು ಎಂಬುದು ಅದರ ಇನ್ನೊಂದು ಮುಖ್ಯ ಶಿಫಾರಸು !

ಕಾರ್ಮಿಕರ ವೇತನ

4 ಕಾರ್ಮಿಕರ ವೇತನಕ್ಕೆ ಸಂಬಂಧಪಟ್ಟಂತೆ ದ್ವಿಪಕ್ಷೀಯ ಮಾತುಕತೆಗಳ ವ್ಯವಸ್ಥೆಯನ್ನು ಕೊನೆಗೊಳಿಸಿ, ವೇತನ ಮಂಡಳಿಗಳನ್ನು ನೇಮಿಸುವುದು ವೇತನದ ಒಂದು ಭಾಗವನ್ನು ಉತ್ಪಾದಕತೆಯೊಂದಿಗೆ ಜೋಡಿಸಬೇಕೆಂದು ಸಮಿತಿ ಶಿಫಾರಸು ಮಾಡಿದೆ. ಈ ಎರಡೂ ಸಲಹೆಗಳು ಹಿಂದೆಯೂ ಬಂದಿದ್ದು ವೇತನ ಮಂಡಳಿಗಳನ್ನು ಆಡಳಿತ ವರ್ಗಗಳು ಸಮಯ ತಳ್ಳುವ ಸಾಧನವಾಗಿ ದುರುಪಯೋಗ ಮಾಡಿಕೊಳ್ಳುತ್ತವೆಯೆಂದು ಹಾಗೂ ಒಟ್ಟು ಉತ್ಪಾದನೆಯ ಯೋಜನೆಯಲ್ಲಿ ಕಾರ್ಮಿಕರ ಪಾತ್ರ ಏನೂ ಇಲ್ಲದಿರುವಾಗ ಆಡಳಿತ ವರ್ಗಗಳ ತಪ್ಪು ಯೋಜನೆಗಳಿಗೆ ಕಾರ್ಮಿಕರನ್ನು ಶಿಕ್ಷಿಸಿದಂತಾಗುತ್ತದೆ ಎಂದು ಉತ್ಪಾದಕತೆಯೊಂದಿಗೆ ವೇತನವನ್ನು ಜೋಡಿಸುವುದನ್ನು ಕಾರ್ಮಿಕ ಸಂಘಗಳು ತಿರಸ್ಕರಿಸಿವೆ. ಆದರೂ ಅವನ್ನು ಮತ್ತೊಮ್ಮೆ ಶಿಫಾರಸು ಮಾಡಲಾಗಿದೆ. ಕಾರ್ಮಿಕರು ಅಧಿಕಾರಶಾಹಿಗಳ ಅಡಿಯಾಳಾಗಿರಬೇಕೆಂದು ಇದರ ತಾತ್ಪರ್ಯ.

5 ಲಾಭದಾಯಕವಲ್ಲದ ಉದ್ದಿಮೆಗಳನ್ನು ಮುಚ್ಚಬೇಕೆಂದು ಹಾಗೂ ಅಂತಹ ಸಂದರ್ಭದಲ್ಲಿ ಕಾರ್ಮಿಕರಿಗೆ ಸಾಮಾನ್ಯವಾದ ಭವಿಷ್ಯ ನಿಧಿ, ಗ್ರಾಚ್ಯುಟಿಯೊಂದಿಗೆ ಇನ್ನೂ "ಉದಾರ"ವಾದ ಕೆಲವು ಸೌಲಭ್ಯ ನೀಡಿ ಅವರನ್ನು ಕೆಲಸದಿಂದ ವಜಾ ಮಾಡಬೇಕೆಂದು ಸಮಿತಿ ಶಿಫಾರಸು ಮಾಡಿದೆ. ಪ್ರಧಾನಮಂತ್ರಿಗಳು "ಸುವರ್ಣ ಹಸ್ತಲಾಘವ" ಎನ್ನುವುದು ಇದನ್ನೇ.

6 ಬಂಡವಾಳ ಹೂಡಿಕೆಯಲ್ಲಿ ಇನ್ನ ಕಠಿಣ ನಿಲುವು ಈ ಸಮಿತಿಯಷ್ಟು ಮತ್ತೊಂದು ಪ್ರತಿಗಾಮೀ ಶಿಫಾರಸು ಸತತವಾಗಿ ಮೂರು ವರ್ಷಗಳಿಗೂ ಹೆಚ್ಚು ಕಾಲಕನಿಷ್ಟ 9% ಡಿವಿಡೆಂಡ್ ನೀಡಿರುವ ಅಥವಾ ಕನಿಷ್ಟ 50% ನಿವ್ವಳ ಲಾಭ ತೋರಿಸುವ ಉದ್ದಿಮೆಗಳು ಮಾತ್ರ ಸರಕಾರ ಹಾಗೂ ಬ್ಯಾಂಕ್ ಮತ್ತಿತರ ಹಣಕಾಸಿನ ಸಂಸ್ಥೆಗಳ ಮೂಲಕ ಬಂಡವಾಳ ಪಡೆಯಲು ಅವಕಾಶವಿರಬೇಕು. ಇದ್ದಕ್ಕಿಂತ ಕಡಿಮೆ ಪ್ರತಿಫಲ ನೀಡುವ ಉದ್ದಿಮೆಗಳು (ಅದು ಸರಕಾರದ ನೀತಿಯಿಂದಲೇ ಹಾಗಾಗಿದ್ದರೂ ಕೂಡಾ) ಇನ್ನಷ್ಟು ಬಂಡವಾಳ ಹೂಡಲು ಅವಕಾಶ ನೀಡಬಾರದು. ಅಂದರೆ ಅವು ಸಾಯಬೇಕು. ಇದು ಖಾಸಗೀ ವಲಯಕ್ಕೆ ವ್ಯವಸ್ಥಿತವಾಗಿ ಪ್ರೋತ್ಸಾಹ ನೀಡಲು ಕೊಟ್ಟ ಒಂದು ನೆವವಷ್ಟೆ.

ಒಟ್ಟನಲ್ಲಿ ಸೆನ್‌ಗುಪ್ತಾ ಸಮಿತಿಯ ವರದಿ ಸಾರ್ವಜನಿಕ ವಲಯವನ್ನು ಐ. ಎಮ್. ಎಫ್. ನ ಆದೇಶದಂತೆ ಹೇಗೆ ನಡೆಸುವುದು ಎನ್ನುವುದಕ್ಕೆ ನೀಲನಕ್ಷೆ ತಯಾರಿಸಿ ಕೊಟ್ಟ ಒಂದು ದಾಖಲೆ. ಆದ್ದರಿಂದಲೇ ಕಾರ್ಮಿಕರಿಗೆ ಹಾಗೂ ಸಾರ್ವಜನಿಕ ವಲಯದ ಬಗ್ಗೆ ಆಸಕ್ತಿ ಹೊಂದಿದವರಿಗೆ ಈ ವರದಿಯ ಶಿಫಾರಸುಗಳು ತಿಳಿಯದಂತೆ ಗುಪ್ತವಾಗಿಡಲಾಗಿದೆ.

ಸಾರ್ವಜನಿಕ ವಲಯದ ಉಸಿರು ಕಟ್ಟಿಸುವ ಹವಣಿಕೆ

ಭಾರತದ ಆರ್ಥಿಕ ಸ್ವಾತಂತ್ರ್ಯಕ್ಕೆ ಆ ಮೂಲಕ ಸ್ವತಂತ್ರ ಅಲಿಪ್ತ ವಿದೇಶಾಂಗ ನೀತಿಯ ಅಡಿಪಾಯವಾಗಿರುವ ಸಾರ್ವಜನಿಕ ವಲಯದ ಮೇಲೆ ಭಾರತದ ಖಾಸಗೀ ಬಂಡವಾಳದಾರರ, ವಿದೇಶೀ ಬಹುರಾಷ್ಟ್ರೀಯ ರಣಹದ್ದುಗಳ ಕಣ್ಣು ಬಿದ್ದಿತ್ತು. ಈ ಉದ್ದಿಮೆಗಳನ್ನು ತಾವೇ ನಡೆಸುವುದರಿಂದ ಪಡೆಯಬಹುದಾದ ಲಾಭಗಳ ಕನಸಿನಿಂದ ಜೊಲ್ಲು ಸೋರುತ್ತಿತ್ತು. ಈಗ ರಾಜೀವ್ ಸರಕಾರ ಬುನಾದಿಯನ್ನೆ ಅಲುಗಾಡಿಸುವ, ಜನರನ್ನು ಕೆಲಸದಿಂದ ಹೊರತಳ್ಳುವ ಪ್ರಯತ್ನ ಮಾಡುತ್ತಿದೆ ಇದಕ್ಕೆ ನಾವು ಅವಕಾಶ ಕೊಡಬೇಕೆ ? ನಮ್ಮ ಹೊಟ್ಟೆಯ ಮೇಲೆ ಹೊಡೆಯುವವರಿಗೆ ಮಣಿಯಬೇಕೆ ?

ಡಿಸೆಂಬರ್ 19ರಂದು ಪ್ರಕಟಗೊಂಡ ರಾಜೀವ್‌ಗಾಂಧಿ ಸರ್ಕಾರದ ಹೊಸ ಔಷಧ ನೀತಿ ಸಾರ್ವಜನಿಕ ವಲಯ ಎದುರಿಸಬೇಕಾಗಿ ಬಂದಿರುವ ಇತ್ತೀಚಿನ ಪ್ರಹಾರ. 1975ರಲ್ಲಿ ಪ್ರಕಟವಾದ ಹಾಥಿ ಸಮಿತಿ ವರದಿ ಬಹುರಾಷ್ಟ್ರೀಯ ಔಷಧಿ ಕಂಪೆನಿಗಳ ವಿಪರೀತ ಲಾಭಕೋರತನವನ್ನು ತೃತೀಯ ಜಗತ್ತಿನ ದೇಶಗಳ ಶೋಷಣೆಯನ್ನು ಬಯಲಿಗೆಳೆದು ಅವನ್ನೆಲ್ಲಾ ತಕ್ಷಣ ರಾಷ್ಟ್ರೀಕರಿಸಬೇಕೆಂದು ಶಿಫಾರಸು ಮಾಡಿತ್ತು. ಈ ಶಿಫಾರಸುಗಳು ಜಾರಿಗೆ ಬರದಿದ್ದರೂ 1978ರ ಔಷಧಿ ನೀತಿ ಲೈಸೆನ್ಸ್ ನೀಡಿಕೆಯಲ್ಲಿ ಈ ಕಂಪನಿಗಳ ಮೇಲೆ ಹತೋಟಿ ಯಿಡಲು ಭಾರತದ ಸಾರ್ವಜನಿಕ ಹಾಗೂ ಖಾಸಗೀ ವಲಯದ ಕಂಪೆನಿಗಳಿಗೆ ಕೆಲವು ಮೀಸಲಾತಿಗಳನ್ನು ಜಾರಿಗೆ ತಂದಿತ್ತು. ಜೀವನಾವಶ್ಯಕ, ಪ್ರಾಣ ಕಾಪಾಡುವ ಔಷಧಿಗಳ ಬೆಲೆಗಳನ್ನು ಇಳಿಸಲಾಗಿತ್ತು. ಆದರೆ ಇತ್ತೀಚಿನ ಹೊಸ ಔಷಧಿ ನೀತಿ ಇವನ್ನೆಲ್ಲಾ ತಲೆಕೆಳಗು ಮಾಡಿದೆ. ಸಾರ್ವಜನಿಕ ವಲಯದ ಐ.ಡಿ.ಪಿ.ಎಲ್.ನ ಉತ್ಪಾದನೆಯ ಮೇಲೆ ಮಿತಿ ಹೇರಿ, ಖಾಸಗೀ ಕಂಪೆನಿಗಳ ವಿಶೇಷವಾಗಿ ಬಹುರಾಷ್ಟ್ರೀಯ ಕಂಪೆನಿಗಳ ಶೋಷಣೆ, ಲಾಭ ಕೋರತನಕ್ಕೆ ಭಾರೀ ಇನಾಮು ನೀಡಿದೆ. ಫಲವಾಗಿ ಔಷಧಿಗಳ ಬೆಲೆ 12%ರಿಂದ 25% ರವರೆಗೆ ಏರಬಹುದೆಂದು ಸ್ವತಃ ಕೇಂದ್ರೀಯ ರಾಸಾಯನಿಕ ಮಂತ್ರಿಗಳೇ ನಾಚಿಕೆಯಿಲ್ಲದೆ ಒಪ್ಪಿಕೊಂಡಿದ್ದಾರೆ.

ಸಾಮ್ರಾಜ್ಯಶಾಹೀ ಹಣಕಾಸು ಸಂಸ್ಥೆಗಳ ಆದೇಶವನ್ನು ಶಿರಸಾವಹಿಸಿರುವ ಹೊಸ ಆರ್ಥಿಕ ನೀತಿಯಿಂದಾಗಿ, ಅರ್ಜುನ್ ಸೇನ್‌ಗುಪ್ತಾ ಸಮಿತಿಯ ಸಾರ್ವಜನಿಕ ವಲಯ–ವಿರೋಧಿ ಶಿಫಾರಸುಗಳ ಅನುಷ್ಠಾನದಿಂದಾಗಿ ಸಾರ್ವಜನಿಕ ವಲಯದ ಉದ್ಯಮಗಳನ್ನು ಹೇಗೆ ಒಂದೊಂದಾಗಿ ಕೆಡವಲಾಗುತ್ತಿದೆ ಎಂಬುದಕ್ಕೆ ಇನ್ನೂ ಹಲವಾರು ಉದಾಹರಣೆಗಳಿವೆ. ಎಚ್.ಎಂ.ಟಿ.ಯು ಮಾರುತಿ ಕಾರುಗಳ ಇಂಜಿನುಗಳಿಗೆ ಮದರ್ ಮೆಶಿನನ್ನು ತಾನು ಕೊಡುವುದಾಗಿ ಹೇಳಿತು. ಜಪಾನೀ ಮೆಶಿನುಗಳ ಕಾರ್ಯದಕ್ಷತೆಗೆ ಇದು ಸಮನಾಗಿದ್ದರೂ ಕೂಡಾ ಆರ್ಡರ್ ಜಪಾನೀ ಕಂಪೆನಿಗೇ ದೊರೆಯಿತು.

ಸಾರ್ವಜನಿಕ ವಲಯದ ಭಾರತ ಎಲೆಕ್ಟ್ರಾನಿಕ್ ನಿಗಮ [ಇ.ಸಿ.ಐ.ಎಲ್.] ಸಿ.ಐ.ಎಲ್. ಹಾಗೂ ಇ.ಡಿ.ಓ.ಡಿ.ಸಿ. ಮೊದಲಾದ ಉದ್ಯಮಗಳು ಹಲವಾರು ರೀತಿಯ ಇಲೆಕ್ಟ್ರಾನಿಕ್ ಸರಕುಗಳನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿದ್ದರೂ ಅದೇ ಸರಕುಗಳನ್ನು ವಿದೇಶದಿಂದ ಆಮದು ಮಾಡಲು ಮುಕ್ತ ಅವಕಾಶ ನೀಡಲಾಗಿದೆ. ಕಲ್ಕತ್ತೆಯ ಭೂಗತ ರೈಲಿನ ಎಲೆಕ್ಟ್ರಾನಿಕ್ ಸಾಧನಗಳನ್ನು ತಾನು ಒದಗಿಸುವುದಾಗಿ ಇ.ಸಿ.ಐ.ಎಲ್. ಹೇಳಿದರೂ 600 ಕೋಟಿ ರೂ.ಗಳ ಈ ಕಾಂಟ್ರಾಕ್ಟನ್ನು ವಿದೇಶಿ ಕಂಪನಿಗೆ ನೀಡಲಾಯಿತು.

ಅತ್ತ ಸಾರ್ವಜನಿಕ ವಲಯದಲ್ಲಿ ಕಂಪ್ಯೂಟರ್ ತಯಾರಿಕಾ ಕಂಪನಿಯೆಂಬ ಹೊಸ ಉದ್ದಿಮೆಯನ್ನು ಸ್ಥಾಪಿಸಲಾಗಿದೆ. ಇದರ ಕೆಲಸವೇನು ಗೊತ್ತೆ ? ಕಂಪ್ಯೂಟರ್ ತಯಾರಿಸುವುದಲ್ಲ ! ಭಾರತದಲ್ಲಿ ಅಮೇರಿಕನ್ ಕಂಪೆನಿ ಐ.ಬಿ.ಎಂ.ಗೆ ಆರ್ಡರ್ ದೊರಕಿಸಿಕೊಡುವ ದಳ್ಳಾಳಿ ಕೆಲಸ ಅಷ್ಟೆ.

ಭಾರತದ ಉಕ್ಕು ಉದ್ಯಮ ಜನರ ದುರ್ಬಲ ಕೊಳ್ಳುವ ಶಕ್ತಿಯಿಂದಾಗಿ ಅಂತರಿಕ ಬೇಡಿಕೆಯಿಲ್ಲದೆ, ಪಾಶ್ಚಿಮಾತ್ಯ ದೇಶಗಳಲ್ಲಿ ಬಂಡವಾಳಶಾಹಿಯ ಬಿಕ್ಕಟ್ಟಿನಿಂದಾಗಿ ಆ ದೇಶಗಳ ಆಮದನ್ನು ನಿರುತ್ಸಾಹಗೊಳಿಸುವ ನೀತಿಯಿಂದಾಗಿ ಎದುರಿಸುತ್ತಿರುವ ಸಂಕಷ್ಟಗಳನ್ನು ಉಕ್ಕು ಉದ್ಯಮದ ಕಾರ್ಮಿಕರ ಮೇಲೆ ಹೊರಿಸಲಾಗುತ್ತಿದೆ. ಉಕ್ಕು ಉತ್ಪಾದನೆಯನ್ನು ಸೀಮಿತಗೊಳಿಸಿ, ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸುವ ತಂತ್ರಜ್ಞಾನ ಅಳವಡಿಸಲು ಯೋಚಿಸಲಾಗುತ್ತಿದೆ. ಆಡಳಿತ ವಿಭಾಗದ ನೌಕರರ ದುಡಿಮೆಯ ಅವಧಿಯನ್ನು ಆದಾಗಲೇ 36 ಗಂಟೆಗಳಿಂದ 48 ಗಂಟೆಗಳಿಗೇರಿಸಲಾಗಿದೆ. ವಿಜಯನಗರ ಹಾಗೂ ದೈತಾರಿ ಸ್ಥಾವರಗಳನ್ನು ಬಹುಶಃ ಕೈ ಬಿಟ್ಟಂತೆಯೆ ಈಗಿನ ಸ್ಥಾವರಗಳಿಗೂ ಸೂಕ್ತ ಸಂಪನ್ಮೂಲ ನೀಡಲಾಗುತ್ತಿಲ್ಲ. ಬದಲಾಗಿ ಖಾಸಗೀ ವಲಯವನ್ನು ಆಕರ್ಷಕ ಲಾಭದ ಆಧಾರದ ಮೇಲೆ ಜಂಟಿ ಉದ್ಯಮಗಳಲ್ಲಿ ತೊಡಗುವಂತೆ ಆಹ್ವಾನಿಸಲಾಗುತ್ತಿದೆ.

ಸಾರ್ವಜನಿಕ ವಲಯದ ತೈಲ ಹಾಗೂ ಪ್ರಾಕೃತಿಕ ಅನಿಲ ಆಯೋಗ (ಒ.ಎನ್.ಜಿ.ಸಿ.) ಹಾಗೂ ಆಯಿಲ್ ಇಂಡಿಯಾ ಕಳೆದ ಹಲವು ದಶಕಗಳಿಂದ ಸಾಗರ ಹಾಗೂ ಒಳನಾಡು ತೈಲ ಸಂಶೋಧನೆಯಲ್ಲಿ ಅಗಾಧ ಪ್ರಗತಿ ಸಾಧಿಸಿವೆ. ಆದರೆ ಈಗ ಸಂಪನ್ಮೂಲದ ಅಭಾವದ ನೆಪವೊಡ್ಡಿ ಇನ್ನು ಮುಂದೆ ಇಂತಹ ಸಂಶೋಧನೆಯಲ್ಲಿ ತೊಡಗಬಾರದೆಂದೂ ಅವು ಇದುವರೆಗೆ ಶ್ರಮವಹಿಸಿ ಕಲೆಹಾಕಿದ ತೈಲ ನಿಕ್ಷೇಪಗಳ ಮಾಹಿತಿಗಳನ್ನೆಲ್ಲಾ ವಿದೇಶೀ ತೈಲ ಕಂಪೆನಿಗಳಿಗೆ ತೈಲ ಸಂಶೋಧನೆ ಕೆಲಸ ನಡೆಸಲು ಕೊಡಬೇಕೆಂದು ಆದೇಶ ನೀಡಲಾಗಿದೆ.

ಹಡಗು ನಿರ್ಮಾಣ ಉದ್ಯಮದಲ್ಲಿ ಕೂಡಾ ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ದೇಶದ ಆಂತರಿಕ ಬೇಡಿಕೆಯಲ್ಲಿ 10% ವನ್ನಾದರೂ ಕೊಡಲಾಗುತ್ತಿಲ್ಲ. ಅವು ಬೇಡಿಕೆಯಿಲ್ಲದೆ ಬಡವಾಗುತ್ತಿದ್ದರೂ ಖಾಸಗೀ ಹಡಗು ಸಾಗಾಣಿಕೆ ಕಂಪೆನಿಗಳು, ಜಪಾನ್ ಹಾಗೂ ದಕ್ಷಿಣ ಕೊರಿಯಾಗಳಿಂದ ಹಡಗು ಪಡೆಯಲು ಸ್ವತಃ ಸರಕಾರವೇ ಹಡಗು ಸಾಗಣೆ ಅಭಿವೃದ್ಧಿ ಹಣಕಾಸು ಸಮಿತಿಯ ಮೂಲಕವೇ ಹಣಕಾಸಿನ ನೆರವು ನೀಡುತ್ತಿದೆ !

ರಸಗೊಬ್ಬರ ಉದ್ಯಮದಲ್ಲೂ ಇದೇ ಕಥೆ. ಒಂದೆಡೆ ನಾಮರೂಪ್, ಬರೌನಿ ಹಾಗೂ ದುರ್ಗಾಪುರದ ಸ್ಥಾವರಗಳನ್ನು ಮುಟ್ಟಿ ಸಿಂದ್ರಿಯಲ್ಲಿ 60 ಕಾರ್ಮಿಕರನ್ನು ರಿಟ್ರೆಂಚ್ ಮಾಡುವ ಯೋಚನೆ ನಡೆಯುತ್ತಿದೆ. ಇನ್ನೊಂದೆಡೆ ಕಳೆದ ವರ್ಷವೇ 2400 ಕೋಟಿ ರೂ.ಗಳ ರಸಗೊಬ್ಬರ ಆಮದು ಮಾಡಿಕೊಳ್ಳಲಾಗಿದೆ.

ಹೆಚ್. ಬಿ. ಜೆ. ಪೈಪ್ ಲೈನ್‌ನ 1500 ಕೋಟಿ ರೂ.ಗಳ ಕಾಂಟ್ರಾಕ್ಟನ್ನು ಬಿ. ಹೆಚ್. ಇ. ಎಲ್. ಬದಲಾಗಿ ಇಟಾಲಿಯನ್ ಕಂಪೆನಿಗೆ ಹೆಚ್ಚಿನ ವೆಚ್ಚದಲ್ಲಿ ನೀಡಲಾಗಿದೆ.

ಹಲವಾರು ತಾಪಶಕ್ತಿ ಕೇಂದ್ರಗಳನ್ನು ತಾನು ಪೂರೈಸುವುದಾಗಿ ಬಿ. ಹೆಚ್. ಇ. ಎಲ್. ಅತೀ ಕಡಿಮೆ ಟೆಂಡರ್ ಕೊಟ್ಟಿದ್ದರೂ ಆರ್ಡರ್‌ಗಳು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ಹೋದವು. ಬಿ. ಹೆಚ್. ಇ. ಎಲ್. ನ ಅಧ್ಯಕ್ಷ ಈ ಬಗ್ಗೆ "ಯಾವ ದೇಶವೂ ತನ್ನ ಸ್ವದೇಶೀ ಕೈಗಾರಿಕೆಗಳನ್ನು ತಾನೇ ಕೊಲ್ಲುವುದಿಲ್ಲ ನಾವು ಆರ್ಡರುಗಳಿಗಾಗಿ ಹೋರಾಡುತ್ತೇವೆ" ಎಂದು ಪತ್ರಿಕಾ ಹೇಳಿಕೆ ನೀಡಬೇಕಾಗಿ ಬಂತು.

ದೂರ ಸಂಪರ್ಕ ಇಲಾಖೆ 700 ಕೋಟಿ ರೂ.ಗಳ ಕಾಂಟ್ರಾಕ್ಟನ್ನು ಐ. ಟಿ. ಐ. ಗೆ ನಿರಾಕರಿಸಿ ವಿದೇಶಿ ಕಂಪೆನಿಗೆ ನೀಡಿದೆ. ಅತ್ತ ಇದೇ ಐ.ಟಿ.ಐ ಆಧುನೀಕರಣದ ಹೆಸರಿನಲ್ಲಿ 10ಸಾವಿರ ಕಾರ್ಮಿಕರನ್ನು ರಿಟ್ರೆಂಚ್ ಮಾಡುವ ಯೋಜನೆ ಹಾಕಿಕೊಂಡಿದೆ.

ಆಧುನೀಕರಣದ ಹೆಸರಿನಲ್ಲಿ ಸಾರ್ವಜನಿಕ ವಲಯದಲ್ಲಿ ಈಗಾಗಲೇ ಸಾವಿರಾರು ಉದ್ಯೋಗಾವಕಾಶಗಳನ್ನು ಬಲಿಗೊಡಲಾಗಿದೆ. 1974-75 ರಲ್ಲಿ ರೈಲ್ವೆಯಲ್ಲಿದ್ದ 18 ಲಕ್ಷ ಕಾರ್ಮಿಕರ ಸಂಖ್ಯೆ 1990 ರಲ್ಲಿ 9 ಲಕ್ಷಕ್ಕಿಳಿಯಲಿದೆ. ಅಂಚೆ–ತಂತಿ ಇಲಾಖೆಯಲ್ಲಿ 3 ಲಕ್ಷಕ್ಕೂ ಹೆಚ್ಚು ಮಂದಿ ದಿನಗೂಲಿ ನೌಕರರನ್ನು ತೆಗೆದುಕೊಳ್ಳಲಾಗುತ್ತಿಲ್ಲ. ಆರ್. ಎಮ್. ಎಸ್. ಹಾಗೂ ಎಂ. ಎಂ. ಎಸ್. ನ ಅನ್ನು ಮುಚ್ಚಿ 25000 ಕಾರ್ಮಿಕರಿಗೆ ಕೆಲಸವಿಲ್ಲದಾಗಿದೆ ಬ್ಯಾಂಕ್ ಹಾಗೂ ಎಲ್.ಐ. ಸಿ. ಗಳಲ್ಲಿ ಒಟ್ಟು ಒಂದು ಲಕ್ಷ ಉದ್ಯೋಗಾವಕಾಶಗಳಿಗೆ ಕತ್ತರಿ ಬಿದ್ದಿದೆ.

ಬಿ. ಇ. ಎಮ್. ಎಲ್. ತಯಾರಿಸುತ್ತಿದ್ದ ಮಣ್ಣೆತ್ತುವ ಯಂತ್ರಗಳನ್ನು ಇನ್ನು ಮುಂದೆ ತಯಾರಿಸಲು ಅಮೆರಿಕಾದ ಕ್ಯಾಟರ್‌ಪಿಲ್ಲರ್ ಕಂಪೆನಿಗೆ ನೀಡಿ 2000 ಕಾರ್ಮಿಕರಿಗೆ ಕೆಲಸವಿಲ್ಲದಂತೆ ಮಾಡಲಾಗಿದೆ.

ಜವಳಿ ಉದ್ಯಮದ ಆಧುನೀಕರಣದ ನೆಪದಲ್ಲಿ 2 ಲಕ್ಷದಷ್ಟು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಾರೆ. ಮುಚ್ಚಬೇಕಾದ 26 ಘಟಕಗಳ ಪಟ್ಟಿ ತಯಾರಾಗಿದ್ದು ಈಗಾಗಲೇ 4 ಘಟಕಗಳನ್ನು ಮುಚ್ಚಿಯೇ ಬಿಡಲಾಗಿದೆ.

ಸೆನ್‌ಗುಪ್ತಾ ಸಮಿತಿಯ ಹಣ ಹೂಡಿಕೆ ಕುರಿತಾದ ಶಿಫಾರಸು ಕೂಡಾ ಜ್ಯಾರಿಗೆ ಬಂದಿದೆ. ರಾಷ್ಟ್ರೀಯ ತಾಪ ಶಕ್ತಿ ನಿಗಮ [ಎನ್.ಟಿ.ಪಿ.ಸಿ.] ಹಾಗೂ ರಾಷ್ಟ್ರೀಯ ಜಲ ಶಕ್ತಿ ನಿಗಮ [ಎನ್ ಹೆಚ್. ಪಿ. ಸಿ.] ಆರಂಭಿಸಿರುವ ಆಕರ್ಷಕ ಬಾಂಡ್ ಯೋಜನೆ ಒಂದು ಉದಾಹರಣೆ. ಈ ಮೂಲಕ ಸಾರ್ವಜನಿಕ ವಲಯದೊಳಗೆ ಖಾಸಗೀ ಬಂಡವಾಳವನ್ನು ಆಹ್ವಾನಿಸುವ ಕೆಲಸ ಈಗಾಗಲೇ ಆರಂಭವಾಗಿದೆ.

ಏಶ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಹಾಗೂ ವಿದೇಶೀ ಭಾರತೀಯರಿಗೆ ಸಾರ್ವಜನಿಕ ವಲಯದಲ್ಲಿ ಹಣ ತೊಡಗಿಸಲು ಪೂರ್ಣ ಅವಕಾಶ ನೀಡಲಾಗಿದೆ

ಸಾರ್ವಜನಿಕ ವಲಯದ ಅಧಿಕಾರಶಾಹಿಗಳಿಗೆ ತಮ್ಮ ಮನಬಂದಂತೆ ಕಾರ್ಮಿಕರ ಮೇಲೆ ಪ್ರಹಾರ ನಡೆಸಲು 'ಸ್ವಾಯತ್ತತೆ'ಯ ಹೆಸರಿನಲ್ಲಿ ಅವಕಾಶ ನೀಡುವ ಪ್ರಕ್ರಿಯೆ ಕೂಡಾ ಆರಂಭವಾಗಿದೆ.

ಈ "ಸ್ವಾಯತ್ತತೆ"ಯ ಜೊತೆಗೆ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಭಾರತದ ಬಂಡವಾಳಶಾಹೀ ಕುಳಗಳನ್ನೇ ಆಡಳಿತಾಧಿಕಾರಿಗಳಿಗೆ ನೇಮಿಸುವ ಪ್ರವೃತ್ತಿಯ ಒಂದು ಉದಾಹರಣೆ ಏರ್–ಇಂಡಿಯಾ ಹಾಗೂ ಇಂಡಿಯನ್ ಏರ್‌ಲೈನ್ಸ್‌ಗಳಿಗೆ ಭಾರತದ ಒಂದು ಪ್ರಮುಖ ಗುತ್ತೇದಾರಿ ಬಂಡವಾಳಶಾಹಿಗಳಾದ ರತನ್ ಟಾಟಾ ಹಾಗೂ ರಾಹುಲ್ ಬಜಾಜ್‌ರವರನ್ನು ಅಧ್ಯಕ್ಷರುಗಳನ್ನಾಗಿ ನೇಮಿಸಲಾಗಿದೆ. ಹೀಗೆ ಸಾಗಿದೆ ಭಾರತದ ಸಾರ್ವಜನಿಕ ವಲಯದ ಖಾಸಗೀ ಕರಣ.

ಸಾರ್ವಜನಿಕ ವಲಯ ನಿಷ್ಪ್ರಯೋಜಕವೇ ?

ಸಾಮಾನ್ಯವಾಗಿ ಉದ್ಯಮಗಳನ್ನು ಸಂಕುಚಿತ ವಾಣಿಜ್ಯ ದೃಷ್ಟಿಯಿಂದ ಮಾತ್ರವೇ ಅಂದರೆ ಆದು ಬಂಡವಾಳದ ಮೇಲೆ ನೀಡುವ ಪ್ರತಿಫಲದ ಆಧಾರದ ಮೇಲಷ್ಟೆ ಹೋಲಿಸಲಾಗುತ್ತಿದೆ. ಆದರೆ 1978ರಲ್ಲಿ ಶ್ರೀ ಬಿ. ಎಚ್. ಧೋಲಕಿಯ ಎಂಬುವರು ಒಂದು ಪರ್ಯಾಯ ವಿಧಾನವನ್ನು ರೂಪಿಸಿದರು. ಇದರಲ್ಲಿ ಉತ್ಪಾದನಾ ಪ್ರಕ್ರಿಯೆಯಿಂದ ಸಮಗ್ರ ಆರ್ಥಿಕ ವ್ಯವಸ್ಥೆಗಾಗುವ ಲಾಭವನ್ನು ಒಟ್ಟಾಗಿ ಗಣನೆಗೆ ತಗೊಳ್ಳಲಾಗುವುದು. ಈ ಪ್ರಕಾರ 1960-61 ರಿಂದ 1975–76 ರವರೆಗಿನ ಖಾಸಗೀ ವಲಯದ ಹಾಗೂ ಸಾರ್ವಜನಿಕ ವಲಯದ ಉತ್ಪಾದನಾ ಉತ್ಪಾದನಾ ವಿವರಗಳನ್ನು ಕಲೆ ಹಾಕಿದಾಗ ಕಂಡು ಬಂದ ಫಲಿತಾಂಶ ಹೀಗಿದೆ.

ವರ್ಷ	ಒಟ್ಟು ಉತ್ಪಾದಕತೆ	
	ಖಾಸಗಿ ವಲಯ	ಸಾರ್ವಜನಿಕ ವಲಯ
1960-61	100.00	100.00
1967-68	92.33	118.17
1975-76	102.73	188.79

ಅಂದರೆ 1960-61ಕ್ಕೆ ಹೋಲಿಸಿದರೆ ಸಾರ್ವಜನಿಕ ವಲಯದಿಂದ ಭಾರತದ ಆರ್ಥಿಕ ವ್ಯವಸ್ಥೆಗಾದ ಪ್ರಯೋಜನ 88.79%ರಷ್ಟು ಹೆಚ್ಚಿದರೆ ಖಾಸಗಿ ವಲಯದಿಂದ ಒಟ್ಟು ಆರ್ಥಿಕ ವ್ಯವಸ್ಥೆಗಾಗಿರುವ ಪ್ರಯೋಜನಾ ಕೇವಲ 2.73%

ಬಹುಶಃ ಸಾಮಾಜಿಕ ದೃಷ್ಟಿಯಿಂದ ನೋಡಿದರೆ ಸಾರ್ವಜನಿಕ ವಲಯದ ಮೇಲ್ಮೆ ಇದಕ್ಕೂ ಹೆಚ್ಚು ಸ್ಪಷ್ಟವಾಗಿ ಕಣ್ಣಿಗೆ ಹೊಡೆಯುವಂತೆ ಕಾಣಬಹುದು. ಆದರೇನು ಮಾಡುವುದು ? ಕಣ್ಣಿದ್ದು ಕುರುಡರಾದ ಐ.ಎಮ್.ಎಫ್. ಹಾಗೂ ವಿಶ್ವಬ್ಯಾಂಕ್ ಸೆರೆಯಾಳುಗಳಿಗೆ ಇದು ಬೇಕಿಲ್ಲವಲ್ಲ !

ಹೋರಾಟಗಾರರ ಪ್ರಜಾಪ್ರಭುತ್ವ - ನಿಕರಾಗುವಾ

– ಕಾ|| ಇ. ಎಂ. ಎಸ್. ನಂಬೂದರಿಪಾದ್

[7ನೇ ಪುಟದಿಂದ]

ನಿಕರಾಗುವಾ ಮತ್ತು ಅಫಘಾನಿಸ್ತಾನಗಳು ವಿವಿಧರಾಜಕೀಯ ಪಕ್ಷಗಳೊಂದಿಗೆ, ಧಾರ್ಮಿಕ ಗುಂಪುಗಳೊಂದಿಗೆ ಅಮೇರಿಕೆಯ ದಾಳಿಯನ್ನು ಹೊಡೆದೋಡಿಸಲು ಒಟ್ಟಿಗೆ ತರಲಾಗುತ್ತಿದೆ. ಎರಡೂ ರಾಷ್ಟ್ರಗಳ ಮುಖ್ಯ ಸಮಸ್ಯೆ ಹೊರಗಿನ ದಾಳಿಯಿಂದ ತಮ್ಮ ದೇಶಗಳನ್ನು ಉಳಿಸುವುದು. ಕ್ಯೂಬ ಸಹ ಕಾಲೂ ಶತಮಾನದ ಹಿಂದೆ ಇದೇ ಪರಿಸ್ಥಿತಿಯಲ್ಲಿತ್ತು. ನಿಕರಾಗುವಾ ಸಹ ಕ್ಯೂಬದಂತೆ ಸ್ಪೇನ್‌ನ ವಸಾಹತು. ಅದು ಅಲ್ಲಿನ ಸಾಮಾಜಿಕ ಸಾಂಸ್ಕೃತಿಕ ಜೀವನದ ಮೇಲೂ ಪರಿಣಾಮವನ್ನುಂಟು ಮಾಡಿದೆ. ಸ್ಪಾನಿಶ್‌ಭಾಷೆ ಮತ್ತು ಸಂಸ್ಕೃತಿ ಇಂದು ಕ್ಯೂಬ ಮತ್ತು ನಿಕರಾಗುವಾದಲ್ಲ ಮನೆ ಮಾಡಿದೆ ಹೀಗಾಗಿ ಎರಡು ರಾಷ್ಟ್ರಗಳು ತಮ್ಮ ವಿಮೋಚನೆಗಾಗಿ ತಮ್ಮ ಶೋಷಿತರ ಭಾಷೆಯನ್ನೇ ಬಳಸಬೇಕೆಂದು ಬಂದಿದೆ.

ಸಾಮ್ರಾಜ್ಯ ಷಾಹಿಗಳ ವಿರುದ್ಧ ಕೈಯಲ್ಲಿ ಶಸ್ತ್ರ ಹಿಡಿದು ಹೋರಾಡುವ ಎಲ್ಲರೂ ಸರ್ವಾಧಿಕಾರಿ (Totalitarian) ಗಳೆಂದು ದೂಷಿಸಲ್ಪಡುತ್ತಾರೆ. ನಿಕರಾಗುವಾ ಇಂದು ಇದೇ ಅಪಾಧನೆಗೊಳಗಾಗಿದೆ.

ನಿಕರಾಗುವಾಗೆ ಭೇಟಿ ಕೊಟ್ಟ ನಮಗೆ ಅಲ್ಲಿನ ರಾಜಕೀಯ ವ್ಯವಸ್ಥೆಯ ಬಗ್ಗೆ ಕುತೂಲವಿತ್ತು. ಭಾರತೀಯ ಪ್ರತಿನಿಧಿಗಳಾದ ಜ್ಯೋತಿಬಸು ಮತ್ತು ನನಗೆ ಅಲ್ಲಿನಸಂವಿಧಾನದಬಗ್ಗೆ ಪ್ರಥಮ ಮಾಹಿತಿ ದೊರಕಿಸಿಕೊಳ್ಳುವ ಅವಕಾಶ ಸಿಕ್ಕಿತು. ಕೊಠಡಿ ಪ್ರವೇಶಿಸಿದಾಗ ನಮ್ಮ ರಾಜ್ಯ ಅತಿ ಕಡಿಮೆಯಾಗಿ ಕಂಡಿತು. ನಿಕರಾಗುವಾದ ರಾಷ್ಟ್ರ ವಿಧಾನ ಸಭೆಯಲ್ಲಿ ಕೇವಲ 96 ಸದಸ್ಯರು ಮಾತ್ರ ಇದ್ದಾರೆ. ನಮ್ಮ ದೇಶದ ಸಣ್ಣದಾದ ಕೇರಳದಲ್ಲಿಯೇ 140 ಸದಸ್ಯರಿದ್ದಾರೆ. ಈ 96 ಸದಸ್ಯರಲ್ಲಿ ಚುನಾವಣೆಯಲ್ಲಿ ಭಾಗವಹಿಸಿದ ರಾಜಕೀಯಪಕ್ಷಗಳ ಅಥವಾ ಹೊಂದಾಣಿಕೆ ಮಾಡಿಕೊಳ್ಳಲ್ಪಟ್ಟ ಪಕ್ಷಗಳ ಅಧ್ಯಕ್ಷರು, ಉಪಧ್ಯಾಕ್ಷರೂ ಇರುತ್ತಾರೆ. ಸ್ಯಾಂಡಿನಿಸ್ತಾ, ರಂಗಕ್ಕೆ ಶೇಖಡ 67 ಮತ ಬಿದ್ದಿದ್ದು 61 ಮಂದಿ ಸದಸ್ಯರು ಈ ಗುಂಪಿನವರೇ ಇದ್ದಾರೆ.

ಸ್ಪೀಕರ್‌ಗಾಗಿ ನಮ್ಮಲ್ಲಿ ಇರುವಂತೆ ಕುರ್ಚಿಯ ಬದಲು ಏಳು ಕುರ್ಚಿಗಳಿತ್ತು. ಏಕೆಂದರೆ ಅಲ್ಲಿನ ಸಂವಿಧಾನವು ಒಬ್ಬ ಅಧ್ಯಕ್ಷ, ಮೂವರೂ ಉಪಾಧ್ಯಕ್ಷರು ಮತ್ತು ಮೂವರು ಕಾರ್ಯದರ್ಶಿಗಳನ್ನೊಳಗೊಂಡ ನಿರ್ದೇಶಕ ಮಂಡಳಿ ಒಳಗೊಂಡಿರುತ್ತದೆ. ನಿಕರಾಗುವ ಸರ್ವಾಧಿಕಾರ ಅನುಸರಿಸುತ್ತಿದೆ ಎಂದು ದೂಷಿಸುವ ಎಲ್ಲರಿಗೂ ಈ ನೇರ ಪ್ರತಿನಿಧಿತ್ವವು ಒಂದು ಒಳ್ಳೆಯ ಉತ್ತರವಾಗಿದೆ. ಸಂವಿಧಾದವು ಇದಲ್ಲದೆ ಮಿಶ್ರ ಆರ್ಥಿಕತೆಮತ್ತು ಅಲಿಪ್ತತೆಯನ್ನು ಅನುಸರಿಸುತ್ತಿದ್ದು ಇವು ನಿಕರಾಗುವಾದ ಮೂರು ಮುಖ್ಯ ಆಧಾರ ಸ್ಥಂಭಗಳಾಗಿದೆ.

ಸದಾ ಎಚ್ಚರ ಮತ್ತು ಶಸ್ತ್ರ ಸಜ್ಜಿತ ಹೋರಾಟಗಾರರು

ಕೊನೆಯ ದಿನ ಅಮೇರಿಕೆಯ ಜೊತೆಯಲ್ಲಿ ಕೈಗೂಡಿಸಿದ್ದ ಸಮೋಜಾನ ಕಿರಾಳಶಕ್ತಿಗಳ ವಿರುದ್ಧ ಹೋರಾಡಲು ಕೆಚ್ಚೆದೆಯಿಂದ ನಿಂತ ಸ್ಯಾಂಟನಿಸ್ತಾ ರಾಷ್ಟ್ರೀಯ ವಿಮೋಚನಾರಂಗದ 25ನೇ ವಾರ್ಷಿಕೋತ್ಸವದ ಆಚರಣೆ. ನಾವೆಲ್ಲರೂ ಬಸ್ಸಿನಲ್ಲಿ ಹೋಗುತ್ತಿದ್ದಂತೆ. ಮನಗುವಾದ ಬೀದಿಗಳಲ್ಲಿ ಮುಖದಲ್ಲಿ ನಿರೀಕ್ಷೆ, ಸಂತೋಷ ಮತ್ತು ಆತ್ಮಸ್ಥೈರ್ಯವನ್ನೂ ತುಂಬಿಕೊಂಡ ನಿಕರಾಗುವಾದ ಜನ ಅಲೆ ಅಲೆಗಳಂತೆ ಕೂಗುತ್ತಾ, ಕುಣಿಯುತ್ತಾ ಮೈದಾನದೆಡೆಗೆ ತೆರಳುತ್ತಿದುದನ್ನು ಕಾಣ ಬಹುದಿತ್ತು. ನಾವು ಕುಳಿತ ಬಸ್ಸಿನ ಸುತ್ತಾ ಕಣ್ಣಾಸಿದೆ ವಿಶ್ವದ ಎಲ್ಲೆಡೆಯು ಕಮ್ಯುನಿಸ್ಟರು ಸಮಾಜವಾದಿಗಳು, ವಿಮೋಚನಾ ಹೋರಾಟಗಾರದ ಪ್ರತಿನಿಧಿಗಳು ಅಲ್ಲಿದ್ದರು. ಅವರೆಲ್ಲರಿಗೂ ಒಂದೇ ಸಾಮಾನ್ಯಶತ್ರು ಅದು ಅಮೇರಿಕಾ ಸಾಮ್ರಾಜ್ಯಶಾಹಿ ಮತ್ತು ಅವರ ಜೊತೆಗಾರರು

ಯಾಕೀ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಯಶಸ್ವೀ ಹೋರಾಟ ನಡೆಸಿದ ನಿಕರಾಗುವವರಿಗಾಗಿ ಅಲ್ಲಿ ಸೇರಿದ್ದರು. ಎಲ್ಲಾ ಖಂಡಗಳಿಂದ ತಮ್ಮ ಭೇದಭಾವ ಮರೆತು ಇಡಿ ವಿಶ್ವಾದ್ಯಂತ ನಿಕರಾಗುವಾದ ಜನರೇ ನಿಮಗೆನಾವೆಲ್ಲರೂ ಬೆಂಗಾವಲಾಗಿದ್ದೇವೆ ಎಂದು ತೋರಿಸಲು ಅಲ್ಲಿ ಸೇರಿದ್ದರು. ನಾವು ಭಾರತೀಯರು ನಿಕರಾಗುವಾದವರೊಂದಿಗೆ ಕೇವಲ ಬ್ರಾತೃತ್ವ ತೋರಿಸಿದರೆ ಸಾಲದು ಆದರೆ ಅವರಿಗೆ ಆರ್ಥಿಕವಾಗಿಯು ಬೆಂಬಲ ನೀಡಬೇಕು. ನಿಕರಾಗುವಾ 'ಸ್ವಾತಂತ್ರ್ಯ ರಕ್ಷಣಾ ನಿಧಿ ಸಂಗ್ರಹಿಸಿದ ಪ. ಬಂಗಾಳ ಮತ್ತು ಆಂಧ್ರಪ್ರದೇಶ ರಾಜ್ಯಗಳು ಸಂಗ್ರಹಿಸಿದ 4 ಲಕ್ಷ ಹಾಗೂ 1 ಲಕ್ಷ 17 ಸಾವಿರ ರೂಗಳ ಚೆಕ್ಕನ್ನು ಸತ್ಯಸಾಧನ ಚಕ್ರವರ್ತಿ ಹಾಗು ನಾನು ಅಲ್ಲಿಯ ವಿದೇಶಾಂಗ ಸಚಿವರ ಕೈಗಿತ್ತೆವು. ನಿಕರಾಗುವಾಧ ಹೋರಾಟ ನಮ್ಮ ಹೋರಾಟವೆಂದು ನಾವು ಪರಿಗಣಿಸುತ್ತೇವೆ. ಆದ್ದರಿಂದ ಈ ಕಾರ್ಯ ಮುಂದುವರೆಯುತ್ತೇವೆಂದು ಭರವಸೆ ನೀಡಿದೆವು.

○

ಕ್ಯೂಬಾದ ಕ್ರಾಂತಿಗೆ 28 ವರ್ಷ.

[7ನೇ ಪುಟದಿಂದ]

ಸಾವು ನಿಶ್ಚಿತವೆಂದುಕ್ಯೂಬದ ಪ್ರತೀತಿ. ಈಗಾಗಲೇ ಕ್ಯೂಬದಲ್ಲಿ ಬಂಡೆದ ಜನ ಹೆಚ್ಚಾಗುತ್ತಿದ್ದರು. ಫಿಡಲ್ ಕ್ಯಾಸ್ಟ್ರೋ ಅವರ ನಾಯಕನಾಗಿದ್ದ. ಚೆಗೆವಾರನನ್ನು ನಾಲ್ಕನೇ ಕಾಲಮ್ಮಿನ ಮೇಜರ್ ಆಗಿ ನೇಮಿಸಲಾಯಿತು. ಚೆಗೆವಾರ ನೇತೃತ್ವದಲ್ಲಿ ಹಾಡು ಹಗಲಿನಲ್ಲಿಯೇ ಗೆರಿಲ್ಲಾ ಪಡೆಗಳು ಸಂತಕ್ಲಾರದ ಶಸ್ತ್ರಾಸ್ತ್ರ ಸಂಗ್ರಹಗಳನ್ನು ವಶಪಡಿಸಿಕೊಂಡು, ಸೈನಿಕರ ನೆಲೆಗಳನ್ನು ನಾಶಮಾಡುತ್ತಾ ಹೋಯಿತು. ಫಿಡಲ್‌ಕ್ಯಾಸ್ಟ್ರೋ ಕ್ಯೂಬ ಸರ್ಕಾರದ ಅತ್ಯಂತ ಮಹತ್ವದ ನೆಲೆಯಾಗಿದ್ದ ಹವಾನವನ್ನು ವಶಪಡಿಸಿಕೊಳ್ಳಲು ಸಂತಕ್ಲಾರದ ಯಶಸ್ವಿನ ನಾಯಕನಾದ ಚೆಗೆವಾರನನ್ನು ನೇಮಿಸಿದ. ರೇಡಿಯೋ ಸಂದೇಶಗಳು ತಲುಪಿದ ಕೂಡಲೆ ತುಕಡಿ ಹವಾನದ ಕಡೆ ಹೊರಟಿತು.

ಸರ್ಕಾರದ ಸುದ್ದಿ ಕೇಂದ್ರಗಳು ಗೆರಿಲ್ಲಾ ಪಡೆಗಳನ್ನು ಸಂಪೂರ್ಣವಾಗಿ ನಾಶಮಾಡಿದ್ದೇವೆಂದೇ ವರದಿ ಮಾಡುತ್ತಿದ್ದರೂ ಅಲ್ಲಿಯ ಜನರು ವಾಸ್ತವ ಸ್ಥಿತಿಯನ್ನು ತಿಳಿದಿದ್ದು ಸಾಗುತ್ತಿದ್ದ ತುಕಡಿ ಭಾವಾವೇಶದ ಕೆಂಪು ವಂದನೆಗಳನ್ನು ಸಲ್ಲಿಸಿ ತುಕಡಿಗಳ ಮೇಲೆ ಹೂಮಳೆಗೆರೆಯುತ್ತಿದ್ದರು. ಹವಾನದಲ್ಲಿ ಬಂದಿದ್ದ ತುಕಡಿ ಅಲ್ಲಿನ ಮೇಜರ್ ಫರ್ನಾಂಡಿಸ್‌ಗೆ ಶರಣಾಗಲು ಆಜ್ಞೆ ನೀಡಿದರು. 12.30 ರ ವೇಳೆಗೆ ಗುಂಡಿನ ಮಳೆಗೆರೆಯಲಾಗುತ್ತದೆ. ಫರ್ನಾಂಡಿಸ್‌ಗೆ ಸಂದೇಶ ಹೋಯಿತು.

1959 ಜನವರಿ 1 ಕ್ಯೂಬಾ ಕ್ರಾಂತಿಕಾರರ ಪಾಲಾಯಿತು.

●

ಜಿಲ್ಲಾ ಪರಿಷತ್ ಚುನಾವಣೆ

[2ನೇ ಪುಟದಿಂದ]

ದನ್ನು ಜನರ ಮನಸ್ಸಿನಿಂದ ತೆಗೆದು ತೆಗೆದು ಹಾಕುವ ಪ್ರಯತ್ನ ಮಾಡಬೇಕು.

ಪ್ರಥಮ ಸಲ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) ಪ್ರತ್ಯೇಕವಾಗಿ ಸ್ಪರ್ಧಿಸಿದೆ. ಪಕ್ಷದ ರಾಜಕೀಯವನ್ನು ಪರಿಣಾಮಕಾರಿಯಾಗಿ ಜನರ ಮಧ್ಯೆ ತೆಗೆದುಕೊಂಡು ಹೋಗಲು ಸಾಧ್ಯವಾಗಿದೆ. ನೂರಾರು ಕಾರ್ಯಕರ್ತರು ಉಪವಾಸ-ವನವಾಸ ಬಿದ್ದು, ಹಸಿವು-ದಣಿವುಗಳನ್ನು ಕಡೆಗಣಿಸಿ, ಗುಂಡಾಗಿರಿ, ಬೆದರಿಕೆಗಳನ್ನೆದುರಿಸಿ ಪ್ರಚಾರ ಮಾಡಿದ್ದಾರೆ. ತಮ್ಮ ನಿಷ್ಟೆ ವ್ಯಕ್ತ ಮಾಡಿದ್ದಾರೆ. ಧೈರ್ಯ ತೋರಿಸಿದ್ದಾರೆ. ಈ ಚುನಾವಣೆಯಿಂದಾಗಿ ನೂರಾರು ಹೊಸ ಕಾರ್ಯಕರ್ತರು ಕ್ರಾಂತಿಕಾರಿಗಳಿಗೆ ವಾಸ್ತವ ಪರಿಸ್ಥಿತಿಯ ಅರಿವು, ಪಡೆದು ಸಮಸ್ಯೆಗಳನ್ನೆದುರಿಸಿ, ಸಂಘಟನೆ ಕಟ್ಟಿ ಹೋರಾಡುವುದೇ, ಅವರ ಗುರಿ. ಈ ಚುನಾವಣೆಯ ಅನುಭವಗಳನ್ನು ಕ್ರೋಢೀಕರಿಸಿ ನಮ್ಮ ಗುರಿಯತ್ತ ಮುಂದೆ ಸಾಗೋಣ.

○

ಕಾಮಧೇನುವನ್ನೇ ಕೊಲ್ಲುವ ಜನ

[4ನೇ ಪುಟದಿಂದ]

ಒಬ್ಬ ತಮ್ಮ ಪ್ರೀತಿಯ ಮಕ್ಕಳು ಒಂದಿಬ್ಬರು ಕಳ್ಳತನದಲ್ಲಿ ಹಾಲು ತುಪ್ಪ ಮಾರಿ, ದುಡ್ಡು ಗಂಟು ಮಾಡಿ ತಮ್ಮ ನೆಂಟರಿಷ್ಟರ ಮನೆಗಳಿಗೆ ಸಾಗಿಸಲಾರಂಭಿಸಿದರು. ಸ್ವಿಸ್ ಬ್ಯಾಂಕ್ ಎಂಬುದೊಂದಿಯಂತೆ ಅದರಲ್ಲಿ ಕೆಲವರು ಹಣ ಅಡಗಿಸಿಟ್ಟಿರಬಹುದು ಎಂದೂ ವದಂತಿ. ಇದು ಒಂದು ಕಡೆ.

ಮತ್ತೊಂದು ಕಡೆ, ಮನೆಯ ಯಜಮಾನ ತಾನು ತಿಂದು ಮನೆಯಲ್ಲಿ ತನಗೆ ಬೇಕಾದವರಿಲ್ಲಾ ಕದ್ದು ಮಾರಿ, ಉಳಿದು ಉಳಿದ ಹಾಲನ್ನು ಬೇರೆಯವರಿಗೆ ಮಾರುವಾಗ, ಅವರು ಕೇಳಿದ ಬೆಲೆಗೆ ಕೊಟ್ಟು. ಅವರ ಹತ್ತಿರ ತನ್ನದೊಂದು ಕರ್ಜಿಗೆ ಮೊದಲೇ ಸಾಲ ಪಡೆದು ಹಿಂದಿನ ಧಣಿಗಳ ಕೈಗೆ ಮತ್ತೆ ಸಿಕ್ಕಿಕೊಂಡದ್ದರ ಫಲ ಇದು. ಸಾಲ ಕೊಟ್ಟವರು ಸುಮ್ಮನೆ ಕೊಡುತ್ತಾರೆಯೇ ನೀವೇ ನೋಡಿ ವಿಶ್ವ ಬ್ಯಾಂಕ್ ಎನ್ನಿಸಿಕೊಂಡ ಆ ದೊಡ್ಡ ಬ್ಯಾಂಕೇ ಒಮ್ಮೆ ಸಾಲ ಕೇಳಿದರೆ ಸಾಕು ಯಾವಾಗಲೂ ಸಾಲ ಕೇಳುತ್ತಲೆ ಇರಬೇಕು ಹಾಗೆ ಮಾಡುತ್ತದೆಯಂತೆ ಇನ್ನು ಇವರು ಬಿಟ್ಟಾರೆಯೆ ಸಾಲ ಕೊಟ್ಟರು ಸಾಲ ಕೊಡುತ್ತಲೇ ಹೋದರು ಕೇಳುತ್ತಾಲೇ ಹೋದ.

ಎಂತಾ ಕಾಮಧೇನುವೇ ಆದರೂ ಹೊಟ್ಟೆಗೆ ಹಾಕದಿದ್ದರೆ ಏನಾದೀತು ? ಅದು ಮೂಳೆ ಬಿಟ್ಟುಕೊಂಡು ಬಡಕಲಾಯಿತು. ಹಾಲು ಕರೆಯುವುದು ಕಡಿಮೆ ಆಯಿತು. ಆದರೆ ಇದೇ ಕಾಮಧೇನುವಿನ ಮರಿಗಳನ್ನು ನಮ್ಮ ಕಥಾನಾಯಕ ಪಡೆದುಕೊಂಡಿದ್ದಂತೆಯೇ ಅದೇ ಸಮಯದಲ್ಲಿಯೇ ಜೀತದಿಂದ ಬಿಡುಗಡೆಯಾದ ಇನ್ನೂ ಕೆಲವು ಮನೆಯವರು ಪಡೆದಿದ್ದರು. (ಚೀನಾ, ಹಂಗರಿ, ಪೂರ್ವಜರ್ಮನಿ ಮೊದಲಾದ ದೇಶದವರು) ಅವರು ಚೆನ್ನಾಗಿ ಸಾಕಿ ಸಲಹಿದ್ದರಿಂದ ಒಳ್ಳೆಯ ಕರುಗಳನ್ನು ಹಾಕಿದ್ದು ಮಾತ್ರವಲ್ಲ ಈಗಲೂ ಹಾಲಿನ ಹೊಳೆಯೇ ಹರಿಯುತ್ತಿದೆ. ಜನ ಸಂತೋಷವಾಗಿ, ಆರೋಗ್ಯವಾಗಿ ಇದ್ದಾರೆ.

ನಮ್ಮ ಮನೆಯಲ್ಲಿ ಏಕೆ ಕಾಮಧೇನು ಬಡಕಲಾಯಿತು, ಹಾಲು ಕಡಿಮೆಯಾಯಿತು ಎನ್ನುವುದಕ್ಕೆ ಕಾರಣ ತನ್ನಲ್ಲೇ ತನ್ನ ಭಂಟರಲ್ಲೇ ಹುಡುಕುವುದು ಬಿಟ್ಟು, ನಮ್ಮ ಯಜಮಾನ, ಚೆನ್ನಾಗಿ ದುಡಿದು ದುಡಿದೂ ಸಣ್ಣಾದವರನ್ನೇ ದಂಡಿಸ ತೊಡಗಿದ, "ಈ ಮನೆಯಲ್ಲಿ ಯಾರೂ ದುಡಿಯುವುದಿಲ್ಲ ಎಲ್ಲಾ ಸೋಮರಿಗಳಾಗಿ ಬಿಟ್ಟಿದ್ದಾರೆ. ಬರೀ ತಿನ್ನುವುದಷ್ಟನ್ನೇ ನೋಡುತ್ತಾರೆ" ಎಂದು ಕೂಗಾಡಿದ ಎದುರು ಬಿದ್ದವರಿಗೆ ಬಾರುಕೋಲು ಹಿಡಿದ ಚೆನ್ನಾಗಿ ಬಾರಿಸಿಯೂ ಬಾರಿಸಿದ. ನಮ್ಮೂರಿನ ಟಾಟಾ, ಬಿರ್ಲಾಗಳ ಮರಿ ಅಲ್ಲವೆ ಇವನು.

ಕಾಮಧೇನುವಿನಿಂದ ಫಲ ಕಡಿಮೆಯಾಯಿತು. ಕೈಯಲ್ಲಿ ಹಣ ಕಡಿಮೆಯಾಯಿತು. ಇದನ್ನು ಸರಿಪಡಿಸುವುದು ಹೇಗೆ ? ಅಂತ ಚಿಂತೆ ಶುರುವಾಯಿತು. ಇದಕ್ಕೆ ವೈದ್ಯರನ್ನು ಹುಡುಕ ತೊಡಗಿದ. ಕಾಮಧೇನುವನ್ನು ಯಾರೂ ಕೊಟ್ಟರೊ ಆ ರಸಿಯಪ್ಪನ ಹತ್ತಿರವೇ ಇದಕ್ಕೆ ಮದ್ದು ಇದ್ದೀತು ಅವರನ್ನೇ ಕೇಳುವ ಅವನ ಮನೆಯಲ್ಲಿ ಕೆಲವರವಾದ, ಆದರೆ ಕಳ್ಳ ಗಂಟು ಮಾಡಿ ಹಣಹೊರಕ್ಕೆ ಸಾಗಿಸಿಕೊಬ್ಬಿದ ಇವನ ಭಂಟರು, "ಇಲ್ಲ ಈ ಕಾಯಿಲೆಗೆ ವಿಲಾಯಿತಿ ವೈದ್ಯರೇ ಬೇಕು ನಮ್ಮ ಹಳೇ ಧಣಿಗಳೇ ಇದಕ್ಕೆ ಸರಿಯಾದ ಇಲಾಜು ಮಾಡಬಲ್ಲವರು" ಅಂತ ವಾದ ಹೂಡಿದರು.

ಕೊಡುತ್ತೇವೆಎನ್ನು ವ ನುಮತ್ತೊಂದು ಇದರಲ್ಲಿ ಕೆಲವು ಕರುಗಳು ಹುಷಾರಾಗ ಬಹುದು ಆದರೆ ಅದಕ್ಕೆ ನಾವು ಕೊಡುವ 'ವಿಟಮಿನ್' ಔಷಧಿ, ಹಾಕಿದ್ದರಷ್ಟೇ ಸಾಧ್ಯ. ನಿಮ್ಮಲ್ಲಿ ಹಣವಿಲ್ಲದಿದ್ದರೆ ನಾವು ಸಾಲವಾಗಿ ಕೊಡುತ್ತೇವೆ ಆಮೇಲೆ ತೀರಿಸಬಹುದು. ವಿಲಾಯತಿ ವೈದ್ಯರು ಹೇಳಿದ ಮೇಲೆ ನಾಟಿ ವೈದ್ಯದವರಿಗೆ ಬೆಲೆ ಇದೆಯೆ ? ತಗೊ, ಒಂದು-ಎರಡು-ಮೂರು-ರಕ್ತ ಧಾರಾಕಾರವಾಗಿ ಹರಿಯುತ್ತಿದೆ.

ಕಳ್ಳ ಗಂಟಿನ ಮಂದಿ ಕೈಯಲ್ಲಿ ಮಚ್ಚು ಹಿಡಿದು ನಿಂತೇ ಬಿಟ್ಟರು

ಸರಿ ಇವರ ವಾದವೇ ಗೆದ್ದಿತು. ವಿಲಾಯತಿ ವೈದ್ಯರನ್ನೇ ಕರೆಸಿದರು. ವಿಲಾಯಿತಿ ವೈದ್ಯರು ಬಹಳ ಒಳ್ಳೆಯ ಇಲಾಜುಗಳನ್ನು ಸೂಚಿಸಿದರು ! ಒಂದು, ಈ ಬಡಕಲು ಕಾಮಧೇನುವನ್ನು ಇಟ್ಟುಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ ಕಸಾಯಿಖಾನೆಗೆ ಅಟ್ಟಿ ಬಿಡಿ ಹಾಲಿಗೆ ಏನೂ ಚಿಂತೆ ಮಾಡಬೇಡಿ ನಮ್ಮ ದೇಶದಲ್ಲಿ ಬೇಕಾದಷ್ಟು ಇದೆ. ಅದನ್ನು ನಿಮಗೆ

ಈ ಕಾಮಧೇನುವನ್ನು ಸಾಕಿ ಅದರ ಕಸಬಳಿದು ಹಿಂಡಿ ಹಾಕಿ ಸಲಹಿದವರಿಗೆ ಅವರ ಕರುಗಳನ್ನೇ ಕತ್ತರಿಸಿದಂತಾಗುತ್ತಿದೆ ರೋಷ ಏರುತ್ತಿದೆ. ಅವರಿಗೆ ಚೆನ್ನಾಗಿ ಗೊತ್ತು ನಿಜವಾದ ಚಿಕಿತ್ಸೆ ಏನು ಅದಕ್ಕೆ ಮದ್ದೇನು, ಅಂತ, ಆದರೆ ಈ ದುಡಿವಜನ ಗೊತ್ತಿರುವುದನ್ನು ಗಟ್ಟಿಯಾಗಿ ಹೇಳಬೇಕಾಗಿದೆ.

○

ಕ್ಯೂಬಾ ಕ್ರಾಂತಿ : ಒಂದು ನೆನಪು

ಕ್ಯೂಬಾದ ಕ್ರಾಂತಿಗೆ 28 ವರ್ಷ.

ಫಿಡೆಲ್ ಕ್ಯಾಸ್ಟ್ರೋ ಚೆಗೆವಾರರ ಈ ನಾಡು ಜಗತ್ತಿನೆಲ್ಲಾ

ಪ್ರಗತಿಪರ ಜನರಿಗೆ ಮೂಡಿಸಿದ ರೋಮಾಂಚನಕ್ಕೆ ಬೆಲೆ ಕಟ್ಟಲಾಗುವುದೆ ?

ಮರೆಯಲಾಗದ ಈ ಕ್ರಾಂತಿಯ ಒಂದು ನೆನಪು

28 ವರ್ಷಗಳ ಹಿಂದೆ ಜನವರಿ 1,1989ರಂದು ಸಾಮ್ರಾಜ್ಯಶಾಹಿಯ ಮೇಲೆ ಪಡೆದ ವಿಜಯ, ಸಮಾಜವಾದದ ಕಡೆಗೆ ಮಾನವ ನಾಗರೀಕತೆ ಹಾಕಿದ ಹೆಜ್ಜೆಯಲ್ಲಿ ಮತ್ತೊಂದು ಹೊಸ ಅಧ್ಯಾಯ. ವಿಶ್ವ ಪ್ರತಿಗಾಮಿ ಶಕ್ತಿಗಳ ಪೋಲೀಸ್ ಆಗಿ ವರ್ತಿಸುವ ಅಮೇರಿಕದ ತೀರದಿಂದ ಕೇವಲ ನೂರು ಮೈಲಿಗಳ ದೂರದಲ್ಲಿ ಪಡೆದ ಈ ವಿಜಯ ವಿಶ್ವಾದ್ಯಂತ ಮಿಲಿಯಾಂತರ ಜನದ ಆಸೆ ಆಕಾಂಕ್ಷೆಗಳನ್ನು ಧೃಡಗೊಳಿಸಿತು.

ಈ 28 ವರ್ಷಗಳಲ್ಲಿ ಸಾಮ್ರಾಜ್ಯಶಾಹಿಗಳ ಧಾಳಿ ದಬ್ಬಾಳಿಕೆಗಳನ್ನು, ಕತ್ತು ಹಿಸುಕುವ ಪ್ರಯತ್ನಗಳನ್ನು ಎದುರಿಸಿ ಮುಂದುವರಿಯುತ್ತಿರುವುದಲ್ಲದೆ ಎಲ್ಲಾ ದೇಶಗಳ ಹೋರಾಟಗಾರ ಜನತೆಗೆ ನಿಕರಾಗುವ, ಮಧ್ಯ ಮತ್ತು ಲ್ಯಾಟಿನ್ ಅಮೇರಿಕದ ಇತರ ಕಡೆಗಳಲ್ಲಿ ಹಾಗೂ ಆಫ್ರಿಕಾ ಖಂಡದ ಅಂಗೋಲ, ದ. ಆಫ್ರಿಕಾಗಳಲ್ಲಿ ವಿಯಟ್ನಾಂ, ಕಂಪೂಚಿಯಾ, ಮಧ್ಯ ಪ್ರಾಚ್ಯ ಹಾಗೂ ಅಫ್‌ಗಾನಿಸ್ತಾನಗಳಲ್ಲಿ ಇತರೆಡೆಗಳಲ್ಲಿ ಕ್ರಿಯಾಶೀಲ ಬೆಂಬಲ ನೀಡುತ್ತಾ ಕಾರ್ಮಿಕ ಅಂತರರಾಷ್ಟ್ರೀಯತೆಯನ್ನು ಎತ್ತಿ ಹಿಡಿದಿದೆ.

ಐ.ಎಂ. ಎಫ್ ಹಾಗೂ ವಿಶ್ವ ಬ್ಯಾಂಕ್‌ಗಳ ಸಾಲದ ಜಾಲದ ವಿರುದ್ಧ ಕ್ಯೂಬಾ ಎತ್ತಿದ ಧ್ವನಿ ಇಂದು ಮಿಲಿಯಾಂತರ ಶೋಷಿತ ಜನತೆಯ ಧ್ವನಿಯಾಗಿದೆ.

ಸಮಾಜವಾದವನ್ನು ಧೃಡಗೊಳಿಸುವ ಹಾದಿಯಲ್ಲಿ ಹಿಂದಿನ ನಾಲ್ಕು ವರ್ಷಗಳಲ್ಲಿ ರಾಷ್ಟ್ರೀಯ ಉತ್ಪನ್ನ 7.3 ರಷ್ಟು ಸಾಮಾಜಿಕ ವಸ್ತುಗಳ ಬಳಕೆ ಶೇ. 7.1 ರಷ್ಟು ಹೆಚ್ಚಿದೆ.

ರಾಷ್ಟ್ರಾದ್ಯಂತ ತೀವ್ರ ಚರ್ಚೆಗಳ ನಂತರ ವರ್ಷಾಂತ್ಯದಲ್ಲಿ ಅಂಗೀಕರಿಸಿದ ಪಕ್ಷದ ಕಾರ್ಯಕ್ರಮ ಕ್ಯೂಬನ್ ಕ್ರಾಂತಿಯ ಅನುಭವಗಳ ಸಾರವನ್ನು ಭಟ್ಟಿಯಿಳಿಸಿ ತೆಗೆದಂತಾಗಿದೆ.

ಕ್ಯೂಬಾದ ಸಮಾಜವಾದವನ್ನು ಬಲಗೊಳಿಸುವುದೆಂದರೆ ಜಗತ್ತಿನ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳನ್ನು, ಸಮಾಜವಾದದೆಡೆಗೆ ಮಾನವ ಜನಾಂಗದ ಮುನ್ನಡೆಯನ್ನು ಬಲಗೊಳಿಸಿದಂತೆ. ಈ ಕರ್ತವ್ಯದಲ್ಲಿ ಸಿ.ಪಿ.ಐ. (ಎಂ) ಭಾರತದ ಜನತೆಯನ್ನು ಅಣಿನೆರಸುವ ಕೆಲಸವನ್ನು ಮುಂದುವರಿಸುತ್ತದೆ. ಅಮೇರಿಕದ ಸಾಮ್ರಾಜ್ಯಶಾಹಿ ತಂತ್ರಗಳ ವಿರುದ್ಧ ತನ್ನ ಧೃಡ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸುತ್ತದೆ. **ಕೇಂದ್ರ ಸಮಿತಿ**

ಇಂದು ಕ್ಯೂಬಾದಲ್ಲಿ ಒಂದು ಮಗುವೂ ಶಾಲೆಯಿಂದಾಚೆ ಉಳಿದಿಲ್ಲ. ನೂರಕ್ಕೂ ಕಡಿಮೆ ಕುಟುಂಬಗಳಿಗೊಬ್ಬ ವೈದ್ಯರಿದ್ದಾರೆ. ಜೀವನದ ವಿಸ್ತಾರ 74 ವರ್ಷಗಳಿಗೇರಿದೆ.

ನ್ಯೂಯಾರ್ಕ್‌ನಲ್ಲಿ ವಿಚಿತ್ರ ಗಡ್ಡದ ಹುಡುಗನೊಬ್ಬ ಎತ್ತರದ ಕಂಠದಲ್ಲಿ ನೆರೆದಿದ ಜನರಿಗೆ ಕೂಗಿ ಹೇಳುತ್ತಿದ್ದ. 1956ರ ವೇಳೆಗೆ ನಾವು ವಿಜಯಶೀಲರಾಗುತ್ತೇವೆ. ಇಲ್ಲದಿದ್ದಲಿ ಹುತಾತ್ಮರಾಗುತ್ತೇವೆ" ಆತನ ಕಂಠದಲ್ಲಿದ್ದ ದೃಢತೆ ಅವರು ಖಂಡಿತಾ ವಿಜಯಿಗಳಾಗುತ್ತಾರೆಂಬುದನ್ನು ಸಾರುತ್ತಿತ್ತು. ಆ ವಿಚಿತ್ರ ಗಡ್ಡದ ಅಂದಿನ ಹುಡುಗನೇ ಫಿಡೇಲ್ ಕ್ಯಾಸ್ಟ್ರೋ, ಕ್ಯೂಬದ ಹೋರಾಟದ ನೇತಾರ.

ಮೇರಿಯಾ ಅಂಟೋನಿಯಾ ಎಂಬ ಕ್ರಾಂತಿಕಾರಿಯ ಮನೆಯಲ್ಲಿ, ಗುಪ್ತ ಕ್ರಾಂತಿಕಾರರ ಸಭೆ ಸೇರಿತ್ತು. ಕ್ಯೂಬಾದ ಸರ್ವಾಧಿಕಾರಿ ಬ್ಯಾಟಿಸ್ಟಾ ಸರ್ಕಾರವನ್ನು ಉರುಳಿಸಲು ಕ್ಯೂಬಾದ ಒಂದು ಗುಂಪು ಅಲ್ಲಿ ಸೇರಿತ್ತು. ಬ್ಯಾಟಿಸ್ಟಾನ ಕ್ರೌರ್ಯದಲ್ಲಿ ತನ್ನ ಅಣ್ಣನನ್ನು ಕಳಬುಕೊಂಡಿದ್ದ ಮೇರಿಯಾ ಈ ಕ್ರಾಂತಿಕಾರರಿಗೋಸ್ಕರ ಇಡೀ ತನ್ನ ಮನೆಯನ್ನೇ ಬಿಟ್ಟು ಕೊಟ್ಟಿದ್ದಳು. ಪಕ್ಕದಲ್ಲಿದ್ದ ಪೆಟ್ಟಿಗೆ ಅಂಗಡಿಯವ ಆಗೀಗ ಜೋರಾಗಿ ಡಬ್ಬಾ ಸದ್ದು ಮಾಡುತ್ತಾ ಅಮೇರಿಕೆಯ ಗುಪ್ತಚಾರರ ಬರವಿನ ಸುಳಿವು ನೀಡುತ್ತಿದ್ದ. ಒಳಗೆ ಸೇರಿದ್ದ ಗುಂಪು ಬ್ಯಾಟಿಸ್ಟಾ ವಿರುದ್ಧ ಸಶಸ್ತ್ರ ಹೋರಾಟ ನಡೆಸುವ ತೀರ್ಮಾನಕ್ಕೆ ಬಂದರು. ಈ ಹೋರಾಟ ಅತ್ಯಂತ ಸುಲಭವಾದದ್ದೇನೂ ಆಗಿರಲಿಲ್ಲ. ಮೊಟ್ಟ ಮೊದಲನೆಯದಾಗಿ ಶಸ್ತ್ರಗಳನ್ನು ಕೊಳ್ಳಲು ಹಣ, ನಂತರ ಗುಪ್ತವಾಗಿ ನಡೆಯಬೇಕಾಗಿದ್ದ ಶಸ್ತ್ರ ಸರಬುರಾಜು, ಇದಕ್ಕಿಂತಲೂ ಮಿಗಿಲಾಗಿ ಈ ಹೋರಾಟಕ್ಕೆ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕಾಗಿದ್ದ ಸಂಗಾತಿಗಳು. ಕ್ಯೂಬಾದೆಡೆಗೆ ತೆರಳಲು ಒಂದು 'ನೌಕೆ ?' ಮೆಕ್ಸಿಕೋದಲ್ಲಿ ಸೇರಿದ್ದ ಈ ಗುಂಪು ಕ್ಯೂಬದ ವಿಮೋಚನೆಗಾಗಿ ಬೃಹತ್ ಪ್ರಮಾಣದಲ್ಲಿ ಶಸ್ತ್ರಗಳನ್ನು, ಹಣ ಹಾಗೂ ಸಂಗಾತಿಗಳಿಗಾಗಿ ದುಡಿಯ ತೊಡಗಿದ್ದರು. ಹಗಲಿರುಳೂ ಶಿಸ್ತುಬದ್ಧವಾಗಿ ಕೆಲಸ ಸಾಗುತ್ತಿತ್ತು.

ಆ ಸಮಯದಲ್ಲಿಯೇ ಮೇರಿಯಾ ಫಿಡೆಲ್‌ಕ್ಯಾಸ್ಟ್ರೋವನ್ನು ಅರ್ಸಾಸಿಯೋನಿಗೆ ಪರಿಚಯಿಸಿದಳು. ಅರ್ಸಾಸಿಯೋ ಬಳಿ ಮುದ್ರಣ ಯಂತ್ರವಿತ್ತು. ಎಲ್ಲಕ್ಕಿಂತಲೂ ಹೆಚ್ಚಾಗಿ ಈಗ ದೈಹಿಕ ವ್ಯಾಯಾಮದಲ್ಲಿ ನುರಿತವನು. ಫಿಡೆಲ್‌ನ ಸಲಹೆಯಂತೆ ಈತ ಗೆರಿಲ್ಲಾಗಳ ಗುಂಪಿಗೆ ದೈಹಿಕ ವ್ಯಾಯಾಮದ ತರಬೇತಿ ನೀಡಲಾರಂಭಿಸಿದ. ಈ ಸಮಯದಲ್ಲಿಯೇ ಮಿಲಿಟರಿಯಿಂದ ನಿವೃತ್ತನಾದ ಆಲ್ಬರ್ಟ್ ಬೇಯೋ ಪರಿಚಯವಾಯಿತು. ಬೇಯೋ ಗೆರಿಲ್ಲಾಗಳನ್ನು ಬೆಟ್ಟಗಳಿಗೆ ಕರೆದೊಯ್ದು ತೀವ್ರ ಗೆರಿಲ್ಲಾ ತಂತ್ರಗಳನ್ನು ಕಲಿಸಿದ. ಮುದ್ರಣಾಲಯದಿಂದ ಬ್ಯಾಟಿಸ್ಟಾ ವಿರುದ್ಧ ಕರಪತ್ರ, ಪುಸ್ತಕಗಳು ಹೊರಬಂದವು. ಸಿ. ಐ. ಎ. ಜಾಗೃತವಾಯಿತು. ಮೇರಿಯಾ ಮನೆಗೆ ಇದ್ದಕ್ಕಿದ್ದಂತೆ ದಾಳಿ- ಹಲವು ಗೆರಿಲ್ಲಾಗಳ ಬಂಧನ. ಚೆಗೆವಾರ ಸಹ ಬಂಧಿತನಾದ. ಸಂಗ್ರಹಿಸಿದ್ದ ಶಸ್ತ್ರಗಳೆಲ್ಲಾ ಸರ್ಕಾರದ ವಶವಾಯಿತು. ಚೆಗೆವಾರನನ್ನು ಬಂಧನದಲ್ಲಿಟ್ಟ ಸರ್ಕಾರ ಇತರರನ್ನು ಬಿಡುಗಡೆ ಮಾಡಿತು. ಚೆಗೆವಾರ ಅಕ್ರಮ ಪ್ರವೇಶದ ಹೆಸರಿನಲ್ಲಿ ಸೆರೆಮನೆಗೆ ದೂಡಲ್ಪಟ್ಟ 1956 ರಲ್ಲಿ ದೀರ್ಘ 57 ದಿನಗಳ ಕಾಲ ಸೆರೆ ಮನೆಯಲ್ಲಿದ್ದ ಚೆಗೆವಾರನ ಬಿಡುಗಡೆಗಾಗಿ ಕಾದಿದ್ದ ಫಿಡಲ್‌ಕಾಸ್ಟ್ರೋ ಗುಂಪು ನಂತರ ಯೋಜನೆಯನ್ನು ಮುಂದುವರಿಸಿದರು.

12 ಸಾವಿರ ಡಾಲರ್ ತೆತ್ತು 'ಗ್ರಾನ್ಮಾ' ನೌಕೆಯೊಂದನ್ನ ತಂದರು. ಗ್ರಾನ್ಮಾ ಅತಿ ಸಣ್ಣದಾದ, ಕೇವಲ 8 ಜನರು ಕೂಡ ಬಹುದಾಗಿದ್ದ ದೋಣಿಯಲ್ಲಿ 80 ಜನರ ಪ್ರಯಾಣ ಸಾಗಬೇಕಾಗಿತ್ತು.

"ಪುಸ್ತಕ ಮಾರಾಟವಾಗಿದೆ"

ಶಸ್ತ್ರಗಳ ಶೇಖರಣೆಯಾದ ಕೂಡಲೆ ಕ್ಯೂಬದಲ್ಲಿ ಲಿಸಿದ ವಿಮೋಚನಾವಾದಿ ಗೆಳೆಯರಿಗೆ, ಸಂಗಾತಿಗಳಿಗೆ ಗುಪ್ತ ತಂತಿ ಸಂದೇಶಗಳನ್ನು ಕಳುಹಿಸಲಾಯಿತು-! 'ಪುಸ್ತಕ ಮಾರಾಟವಾಗಿದೆ.' ಕೂಡಲೆ ಕ್ಯೂಬದ ಜನತೆ ಸಜ್ಜಾಯಿತು. ದಿನಾಂಕ 25 ನವಂಬರ್ 1956 ರಂದು ಅಮೇರಿಕಾ ಸಾಮ್ರಾಜ್ಯಶಾಹಿಗಳ ಮೂಗಿನಡಿಯಲ್ಲಿ ಕೇವಲ 82 ಜನರ ಗೆರಿಲ್ಲಾಪಡೆ ಹೊಸದಾಗಿ ಕೊಂಡು ತಂದಿದ್ದ ಗ್ರಾನ್ಮಾ ನೌಕೆಯಲ್ಲಿ ಪ್ರಯಾಣ ಬೆಳೆಸಿದರು.

ಗ್ರಾನ್ಮಾ ನೌಕೆ ಕ್ಯೂಬದ ಸರಹದ್ದನ್ನ ಪ್ರವೇಶಿಸುತ್ತಿದ್ದಂತೆ ಬ್ಯಾಟಿಸ್ಟಾ ಸರ್ಕಾರದ ಯುದ್ಧ ವಿಮಾನಗಳು ನೌಕೆಯ ಮೇಲೆ ಹಾರಾಡುತ್ತಿದ್ದವು. ತೀರದಲ್ಲಿ ಯುದ್ಧ ಟ್ಯಾಂಕುಗಳು ಕಾಯುತ್ತಿದ್ದವು. ಗ್ರಾನ್ಮಾದ ಕ್ರಾಂತಿಕಾರಿಗಳನ್ನು ಗುರುತಿಸಿದೊಡನೆ ವಿಮಾನಗಳು ಗುಂಡುಗಳ ಮಳೆಗರೆಯಲಾರಂಭಿಸಿತು. ನೌಕೆ ತಲ್ಲಣಿಸತೊಡಗಿತು. ನಿರಂತರ ಸರ್ಪಕಾವಲಿನ ಮಧ್ಯೆ ಮಧ್ಯ ರಾತ್ರಿಯಲ್ಲಿ ಆತಂಕವನ್ನು ಹೊತ್ತ ಗೆರಿಲ್ಲಾ ಗುಂಪು ತೀರದಲ್ಲಿ ಬೆಳೆದಿದ್ದ ಕಬ್ಬಿನ ತೋಟಗಳ ಮಧ್ಯೆ ಸದ್ದಾಗದಂತೆ ತೆವಳಲಾರಂಭಿಸಿತು. ಹಸಿವು ಬಾಯಾರಿಕೆಗಳಿಂದ ತಲ್ಲಣಗೊಂಡಿದ್ದ ಗೆರಿಲ್ಲಾ ತಾಣದ ಮೇಲೆ ಪುನಃ ವಿಮಾನಗಳು ಧಾಳಿ ಪ್ರಾರಂಭಿಸಿದವು. ಗೆರಿಲ್ಲಾಗಳಲ್ಲಿ ಹಲವರಿಗೆ ಗುಂಡೇಟು ತಗಲಿತು. ಚೆಗೆವಾರನ ಎದೆಗೂ ಗುಂಡು.

ರೈತರ ಗುಡಿಸಲುಗಳಲ್ಲಿ ಗಾಯಗೊಂಡ ಗೆರಿಲ್ಲಾಗಳು ರಕ್ಷಣೆ ಪಡೆಯುತ್ತಿದ್ದಂತೆ ಫಿಡೆಲ್‌ಕ್ಯಾಸ್ಟ್ರೋ ಸಿಯರ್ ಮಾಸ್ಟಿಲಾ ಬೆಟ್ಟಗಳನ್ನು ತಮ್ಮ ರಕ್ಷಣೆಯ ಸ್ಥಳವನ್ನಾಗಿ ಮಾರ್ಪಡಿಸಿದ್ದರು ದಟ್ಟವಾದ ಬೆಟ್ಟ ಗುಡ್ಡಗಳು ಮೊದಲಿನಿಂದಲೂ ವೀರರ ತಾಣವಾಗಿದ್ದು ಅಲ್ಲಿನ ವೀರರ ವಿರುದ್ಧ ನಿಂತವರಿಗೆ

[6 ನೇ ಪುಟ ನೋಡಿ]

ನಿಕರಾಗುವ : ಸಾವಿನ ಮುಖದಲ್ಲಿ ಬದುಕಿನ ಆಯ್ಕೆ

ನಿಕರಾಗುವಾದ ರಾಜಧಾನಿ ಮನಗುವಾದಲ್ಲಿ ಸ್ಯಾಂಡಿನಿಸ್ಟಾ ರಾಷ್ಟ್ರೀಯ ವಿಮೋಚನಾ ರಂಗದ 25ನೇ ವಾರ್ಷಿಕೋತ್ಸವ ಮತ್ತು ಹುತಾತ್ಮ ಕಾರ್ಲೋಸ್ ಪೋನ್ಸಿಕಾರ ಹತ್ತನೇ ವಾರ್ಷಿಕೋತ್ಸವದಲ್ಲಿ ಹಾಜರಾಗಲು ಹವಾನ ಮಾರ್ಗವಾಗಿ ಮನಗುವಾ ತಲುಪಿದೆವು. ನಿಕರಾಗುವಾಗೆ ಹೋಗುವ ದಾರಿಯಲ್ಲಿ ಕ್ಯೂಬಾದ ರಾಜಧಾನಿ ಹವಾನದಲ್ಲಿ ಒಂದೂವರೆ ಗಂಟೆಗಳಷ್ಟು ನಿಲ್ಲುವ ಅವಕಾಶ ಸಿಕ್ಕಿತ್ತು.

ದೂರ ಆದರೂ ಹತ್ತಿರ

ಹವಾನಾದಲ್ಲಿ ನಮ್ಮನ್ನು ಸ್ವಾಗತಿಸಿದ ಕ್ಯೂಬದ ಕ್ರಾಂತಿಕಾರಿಗಳು ನಮ್ಮ ಹಿಂದಿನ ಭೇಟಿಯನ್ನು ನೆನಪಿಸಿಕೊಂಡರು. ಹೊರಡುವ ಮುನ್ನ ಕ್ಯೂಬನ್ ಸಂಗಾತಿಗಳು "ನಮ್ಮ ರಾಷ್ಟ್ರಗಳು ಎಷ್ಟೊಂದು ದೂರ ಎನಿಸಿ" ಎಂದರು. ನನ್ನ ಗಡಿಯಾರ ಕೂಟ ಅದನ್ನು ಸಾಬೀತು ಮಾಡಿತ್ತು. ಹವಾನದ ಬೆಳ್ಳಂ ಬೆಳಗ್ಗೆ ನನ್ನ ಗಡಿಯಾರದಲ್ಲಿ ರಾತ್ರಿ ತೋರಿಸುತ್ತಿತ್ತು.

ಅಮೇರಿಕಾದ ಕಕ್ಷೆಯಲ್ಲಿ ನಿಕರಾಗುವಾದವರಂತೆ ಕೈಯಲ್ಲಿ ಶಸ್ತ್ರ ಹಿಡಿದು ತಮ್ಮ ವಿಮೋಚನೆಗಾಗಿ ಹಲವರು ಹೋರಾಟಕ್ಕೆ ಸನ್ನದ್ಧರಾಗಿದ್ದಾರೆ ಕ್ಯೂಬ ಹಾಗೂ ನಿಕರಾಗುವಾದ ಸಂಗಾತಿಗಳು ಸೇರಿದಂತೆ ಇಂದು ಅಮೇರಿಕಾದ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಸಮಾಜವಾದಿ ದೇಶಗಳ ಸಹಕಾರವೊಂದಿಗೆ ಅಲಿಪ್ತ ಚಳುವಳಿ ಹುಟ್ಟು ಹಾಕಲಾಗಿದೆ.

ನಿಕರಾಗುವಾದ ವಾರ್ಷಿಕೋತ್ಸವದಲ್ಲಿ ಭಾಗವಹಿಸುತ್ತಿದ್ದ, ಪ್ರತಿನಿಧಿಗಳ ನಿಯೋಗವನ್ನು ನೋಡಿದರೆ ಪ್ರಪಂಚದ ಎರಡು ಬಲಿಷ್ಟ ಚಳುವಳಿಗಳಾದ ಅಲಿಪ್ತ ಚಳುವಳಿ ಮತ್ತು ಪ್ರಪಂಚದ ಕಮ್ಯೂನಿಸ್ಟ್ ಚಳುವಳಿ ಹಿಂದೆ ಕ್ಯೂಬಾಗಿದ್ದಂತೆ ನಿಕರಾಗುವಾದ ಹೋರಾಟದ ಬೆನ್ನಿಗಿತ್ತು. ಆದ್ದರಿಂದಲೇ ನಾವು ದೂರವಾಗಿದ್ದರೂ ಅತ್ಯಂತ ಹತ್ತಿರವಿದ್ದಂತಿತ್ತು.

ಕ್ಯೂಬ, ಅಫ್‌ಘಾನಿಸ್ತಾನ ಮತ್ತು ನಿಕರಾಗುವ

ನಿಕರಾಗುವಾದ ನೆಲದಲ್ಲಿ ಸಂಚರಿಸುತ್ತಿದ್ದಾಗ ನನಗೆ ನಾಲ್ಕೂವರೆ ವರ್ಷಗಳ ಹಿಂದೆ ಕ್ಯೂಬಾಗೆ ಮತ್ತು ಎರಡು ವರ್ಷದ ಹಿಂದೆ ಅಫ್‌ಘಾನಿಸ್ತಾನಕ್ಕೆ ಭೇಟಿಕೊಟ್ಟಿದ್ದು ನೆನಪಿಗೆ ಬಂತು. ಈ ಮೂರು ರಾಷ್ಟ್ರಗಳ ಸ್ಥಿತಿಗಳಲ್ಲಿ ಹಲವು ಸಾಮ್ಯವಿದ್ದಂತೆ ಭಿನ್ನತೆಯೂ ಇತ್ತು.

ಯಾವಾಗಲೂ ಹೊರಗಿನಿಂದ ದಾಳಿಯನ್ನು ನಿರೀಕ್ಷಿಸುತ್ತಿರುವಂತೆ ವಿಮಾನ ನಿಲ್ದಾಣ ಹಾಗೂ ರಸ್ತೆಯ ಇಕ್ಕೆಲಗಳಲ್ಲಿ ನಮ್ಮ ದೆಹಲಿಯಂತೆ ಬಿಗಿ ಬಂದೋಬಸ್ ಏರ್ಪಡಿಸಲಾಗಿತ್ತು. ಕ್ಯೂಬಾದ ಪರಿಸ್ಥಿತಿಯೂ ಹಿಂದೆ ಹೀಗೆ ಇತ್ತೇನೋ. ಆದರೆ ಈಗ ಅದು ಸಡಿಲವಾಗಿದೆ. ಏಕೆಂದರೆ ಕ್ಯೂಬಾ ಇಂದು ಅಮೇರಿಕಾದ ವಿರುದ್ಧ ಸಡ್ಡು ಹೊಡೆದು ನಿಂತಿದೆ. ನಿಕರಾಗುವಾ ನೆರೆಯ ಹೊಂಡುರಾಸ್‌ನಿಂದ ನಿರ್ದೇಶಿಸಲಾಗುತ್ತಿರುವ ಕಾಂಟ್ರಗಳ ಸತತ ದಾಳಿಗೊಳಗಾಗಿದೆ. ಅಫಘಾನಿಸ್ತಾನದಲ್ಲೂ ಸಹ ಅಮೇರಿಕಾ ಪಾಕಿಸ್ತಾನಗಳಿಂದ ಪ್ರಚೋದಿತವಾಗಿ ಹಲವು "ದುಶ್ಮನ್" ಗಳು ನಿಲ್ಲದ ಯುದ್ಧವನ್ನು ಸಾರಿವೆ.

[6 ನೇ ಪುಟ ನೋಡಿ]

ನಾಮ ಪತ್ರ ಸಲ್ಲಿಸಲು ಅಡ್ಡಿ

ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ನಾಕಷ್ಟು ಬಲಾತ್ಕಾರ. ಅಡ್ಡಿ ಆಂತಕ ಒಡ್ಡಿದ ಜನತಾ-ಕಾಂಗ್ರೈ ಮುಖಂಡರು ಸಿ.ಪಿ.ಐ. (ಎಂ) ಮತ್ತು ಪ್ರಾಂತ ರೈತ ಸಂಘದವರು ಮಂಡಲ ಪಂಚಾಯತ್ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸಲು ಅಡ್ಡಿ ಮಾಡುತ್ತಿರುವ ವರದಿಗಳು ಬರುತ್ತಿವೆ. "ಬಹಳಷ್ಟು ಊರುಗಳಲ್ಲಿ ನಮ್ಮ ಸಂಗಾತಿಗಳು ಸ್ಪರ್ಧಿಸದಂತೆ ಜನತಾ-ಕಾಂಗ್ರೈ ನವರು ಅಡ್ಡಿಪಡಿಸುತ್ತಿದ್ದಾರೆ. ನಾನು ಪತ್ರಸಲ್ಲಿಸಲು ಹೋದಾಗ ಬಾಗಿಲ ಬಳಿ ಅಡ್ಡ ನಿಂತು ಬೈದು ವಾಪಸ್ ಕಳುಹಿಸುತ್ತಿದ್ದಾರೆ. ಕೆಲವು ಕಡೆ ಜಾತಿ ಆಧಾರದ ಮೇಲೆ ಸ್ಥಾನಗಳನ್ನು ಹಂಚಿ ಅವಿರೋಧ ಆಯ್ಕೆಗೆ ಪ್ರಯತ್ನ ನಡೆಸಿದ್ದಾರೆಂದು ಹೊಸಪೇಟೆಯಿಂದ ಕಾ. ಗುರುಶಾಂತ್ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಕೂಡ ಇದೇ ರೀತಿಯ ದಬ್ಬಾಳಿಕೆ ಬೆದರಿಕೆ ನಡದಿಸೆಂದೂ ಕಾರಣ ಬೆದರಿ ಬಹಳಷ್ಟು ಜನ ಅರ್ಜಿ ಸಲ್ಲಿಸಲಿಲ್ಲೆಂದು ಕಾ. ಸೂರ್ಯನಾರಾಯಣರಾವ್ ತಿಳಿಸಿದ್ದಾರೆ.

ತಮ್ಮ ಅಧಿಕಾರ ಉಳಿಸಿಕೊಳ್ಳುವ ಕಾಂಗ್ರೈ-ಜನತಾ ನೀತಿ ಇದು. ಇಂಥವರಿಂದ ಜನತೆ ಎಚ್ಚರದಿಂದಿರುವುದು ಒಳಿತಲ್ಲವೇ ? ರಾಮಕೃಷ್ಣ ಹೆಗಡೆಯವರ ಮೌಲ್ಯಾಧರಿತ ನೀತಿಯ ಕಾರ್ಯಚರಣೆಯೇ ಇದು ಎಂಬ ಪ್ರಶ್ನೆ ಕೇಳಬೇಕಾಗಿದೆ.

ಸೌಹಾರ್ದತಾ ದಿನ ಆಚರಿಸಿ – ಸಿ. ಐ. ಟಿ. ಯು.

ರಾಜೀವಗಾಂಧಿ ಸರ್ಕಾರದ ಅನರ್ಥಕಾರಿ ಹೊಸ ಆರ್ಥಿಕ ನೀತಿಯನ್ನು ಮತ್ತು ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸಲು ದೇಶಾದ್ಯಂತ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಮತ್ತು ವಿಮೆ, ಬ್ಯಾಂಕ್ ನೌಕರರು ಜನವರಿ 21 ರಂದು ಮುಷ್ಕರವನ್ನು ನಡೆಸುತ್ತಾರೆ. ಮುಷ್ಕರದ 14 ಅಂಶಗಳ ಬೇಡಿಕೆಗಳಲ್ಲಿ ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್ ಕೈಗಾರಿಕಾ ವಿವಾದಗಳ ಕಾಯಿದೆಗಳನ್ನು ಕಾರ್ಮಿಕ ವಿರೋಧಿ ದಿಟ್ಟಿನಲ್ಲಿ ತಿದ್ದುಪಡಿ ಮಾಡುವುದಕ್ಕೆ ವಿರೋಧ, ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯಬೇಕು ಮೊದಲಾದ ಸಮಸ್ತ ಕಾರ್ಮಿಕರನ್ನು ಬಾಧಿಸುತ್ತಿರುವ ಬೇಡಿಕೆಗಳವೆ ಈ ಮುಷ್ಕರಕ್ಕೆ ಕರೆ ಕೊಟ್ಟಿರುವ ಅಖಿಲ ಭಾರತ ಸಮಾವೇಶವು ಈ ಬೇಡಿಕೆಗಳ ಬಗ್ಗೆ ಒತ್ತಾಯಿಸಲು ಎಲ್ಲಾ ಕಾರ್ಮಿಕ ಸಂಘಗಳು 21-1-87 ರಂದು ಸೌಹಾರ್ದತಾ ದಿನವನ್ನು ಆಚರಿಸಬೇಕೆಂದು ಕರೆಕೊಟ್ಟಿದೆ.

ಬೆಂಗಳೂರಿನಲ್ಲಿ 8-1-87 ರಂದು ನಡೆದ ಸಿ.ಐ.ಟಿ.ಯು. ರಾಜ್ಯ ಸಮಿತಿಯ ಪದಾಧಿಕಾರಿಗಳ ಸಭೆಯು ರಾಜ್ಯಾದ್ಯಂತ ಸಿಐಟಿಯು ಸಂಘಗಳು 21.1.1987 ರಂದು ಪ್ರದರ್ಶನಗಳನ್ನು ನಡೆಸಬೇಕು, 21.1.87ರ ಅಖಿಲ ಭಾರತ ಮುಷ್ಕರವನ್ನು ಬೆಂಬಲಿಸಿ ಪತ್ರಿಕಾ ಹೇಳಿಕೆಗಳನ್ನು ಕೊಡಬೇಕು, 14 ಅಂಶಗಳ ಸಭೆಗಳನ್ನು ನಡೆಸಿ ವಿವರಿಸಬೇಕು ಎಂದು ಕರೆ ಕೊಟ್ಟಿದೆ.

ರಾಜ್ಯ ಕಾರ್ಯದರ್ಶಿ ಮಂಡಳಿ ನಿರ್ಣಯ

[7ನೇ ಪುಟದಿಂದ]

ಸಮಸ್ಯೆಗಳನ್ನು ಬಗೆಹರಿಸುವ ಕುರಿತು ಜನತಾಪಕ್ಷವಾಗಲಿ, ಕಾಂಗ್ರೆಸ್ (ಐ) ಪಕ್ಷವಾಗಲಿ, ಚುನಾವಣೆಯ ವೇಳೆ ಆಗಲಿ, ಚುನಾವಣೆಯ ನಂತರವಾಗಲಿ, ಯಾವುದೇ ರೀತಿಯ ವಾಗ್ದಾನವೀಯದಿರುವುದು ವಿಷಾದನೀಯ. ಜಿಲ್ಲಾ ಪರಿಷತ್‌ಗಳ ಮೂಲಕ ಎಷ್ಟುವೊಬಲಗಿನ ಹಣವನ್ನು ತಾವು ನಿಯಂತ್ರಣ ಮಾಡಬಹುದು ಎಂಬುದಕ್ಕಾಗಿ ಮಾತ್ರ ಈ ಎರಡು ಪಕ್ಷಗಳ ತೀವ್ರ ಕಚ್ಚಾಟ.

ಇನ್ನಾದರೂ ಜನತಾ ಪಕ್ಷವು ರಾಜ್ಯದಲ್ಲಿ ಸರ್ವಾಧಿಕಾರಿ ಶಕ್ತಿಗಳ ಬೆಳವಣಿಗೆಯ ಅಪಾಯವನ್ನು ತಿಳಿದುಕೊಂಡು, ಸಜವಾದ ಪರ್ಯಾಯ ಧೋರಣೆಗಳಿಗಾಗಿ ಎಡಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಜತೆಗೂಡುವುದು ಎಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ಆಶಿಸುತ್ತದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಿಷ್ಟಗೊಳಿಸುವುದಕ್ಕಾಗಿ ಪ್ರಕ್ಷೋಭೆ ಮತ್ತು ಚಳುವಳಿಯನು) ನಡೆಸಲು ಮುಂದಾಗಬೇಕೆಂದು ಪಕ್ಷವು ಕರೆ ನೀಡುತ್ತದೆ.

1986 ರಲ್ಲಿ ಕರ್ನಾಟಕ

[7ನೇ ಪುಟದಿಂದ]

ರಾಜ್ಯದಲ್ಲಿ ಇತರರ ಜೊತೆ ಒಕ್ಕಲಿಗರು, ಲಿಂಗಾಯಿತರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಎಲ್ಲರೂ ಹಿಂದುಳಿದವರಾದರು. ಮೀಸಲಾತಿ ಶೇಕಡ 68ಕ್ಕೆ ಏರಿಸಲ್ಪಟ್ಟಿತು. ಎಲ್ಲರಿಗೂ ಸಮಾಧಾನ. ನಿಜವಾದ ಹಿಂದುಳಿದ ಜನರ ಹಿತಗಳಿಗೆ ಕೆಲ ಕಾಲಾನಂತರ ತೊಂದರೆಯಾದರೆ ಏನಂತೆ ? ರಾಮಕೃಷ್ಣ ಹೆಗ್ಗಡೆಯವರ ಸರಕಾರ ಮುಂದುವರೆಯುತ್ತದೆ ತಾನೆ ? ಜನತಾ ಪಕ್ಷ ಜಿಲ್ಲಾ ಪರಿಷತ್ ಚುನಾವಣೆಗಳನ್ನು ಎದುರಿಸಬಹುದು ತಾನೆ ? ಸ್ಥಾಪಿತ ಹಿತಾಸಕ್ತಿಗಳು ಜನತಾ ಪಕ್ಷವನ್ನು ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಬಿಟ್ಟು ಹಾಕಲಿಕ್ಕಿಲ್ಲ ತಾನೆ ?

ಹಿಂದುಳಿದ ವರ್ಗಗಳ ಎರಡನೇ ಆಯೋಗದ ಶಿಫಾರಸುಗಳನ್ನು ಸಂಪೂರ್ಣವಾಗಿ ರದ್ದು ಮಾಡಬೇಕು, ಎಂದು ಕೂಗು ಹಾಕಿದ ಕಾಂಗ್ರೆಸ್ಸು (ಐ) ಯ ತಿಪ್ಪರಲಾಗ. ನಿಜವಾದ ಹಿಂದುಳಿದ ವಿಭಾಗಗಳಿಗೆ ರಾಮಕೃಷ್ಣ ಹೆಗ್ಗಡೆಯವರ ಈಗಿನ ನೀತಿಯಿಂದ ಆಘಾತ–ಎಂದು ಅವರ ಹೊಸ ಧ್ವನಿ:

ಇವೆಲ್ಲದರ ಮಧ್ಯೆ ಜಾತಿ–ವಿಜಾತಿಗಳ, ಗುಂಪುಗಾರಿಕೆಯ ಉಸಿರು ಕಟ್ಟಸುವಂತೆ, ರಾಜ್ಯದ ಗ್ರಾಮೀಣ ಜನರ ಹತ್ತು ಬೇಡಿಕೆಗಳ ಚಾರ್ಟರ್‌ಗಾಗಿ 50,000 ಜನ ರೈತರ, ಕೃಷಿ ಕಾರ್ಮಿಕರ ಬೃಹತ್ "ವಿಧಾನಸೌಧ ಚಲೋ" ಕಾರ್ಯಕ್ರಮ ಎಲ್ಲಾ ಜಾತೀಯ ಮುಖಂಡರನ್ನೂ ಆಹ್ವಾನಿಸಿ ದಿನವೆಲ್ಲ ಚರ್ಚೆ ಮಾಡಿದ ಜನತಾ ಸರಕಾರದ ಒಬ್ಬ ಮಂತ್ರಿಯೂ ಈ ಬಡ ಜನರ ಮನವಿಯನ್ನು ಸ್ವೀಕರಿಸಲು ಇರಲಿಲ್ಲವೆಂಬುದು ಜನತಾ ಸರ್ಕಾರದ ಮುಖಕ್ಕೆ ಹಿಡಿದ ಕನ್ನಡಿ.

ರಾಜ್ಯದಲ್ಲಿ ಮುಂಬರುವ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಲ್ಲಿ ಕಾಂಗ್ರೆಸ್ (ಐ) ಗೆ ಬೆಂಬಲ ಪಡೆಯುವ ದಿಕ್ಕಿನಲ್ಲಿ ಅವರು ಪುನ: ಕ್ಷುಲ್ಲಕ ಕಾರಣವನ್ನು ಮುಂದೊಡ್ಡಿ ರಾಜ್ಯದಲ್ಲಿ ಮುಸ್ಲಿಮರನ್ನೂ

ಪಿ. ರಾಮಚಂದ್ರರಾವ್

ಎಬ್ಬಿಸಿದರು. 17 ಜನರ ಬಲಿ ತೆಗೆದುಕೊಂಡರು– ಇಬ್ರಾಹಿಂ ನೇತೃತ್ವದಲ್ಲಿ !

1986 ರ ಕೊನೆಯ ಬೆಳವಣಿಗೆ ಜಿಲ್ಲಾ ಪರಿಷತ್ ಚುನಾವಣೆ ನಜೀರ್ ಸಾಹೇಬರು "ರಾಜ್ಯದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ಸ್ಥಾಪನೆಯ ಮೂಲಕ ಹೊಸ ಅಧ್ಯಾಯವನ್ನೇ ತೆರೆಯಲಾಗುವುದು" ಎಂದು ಹೇಳಿದ್ದೇ ಹೇಳಿದ್ದೂ, ನಡೆದುದೇನು, ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಭೂಮಾಲಕ–ಸ್ಥಾಪಿತ ಹಿತಾಸಕ್ತಿಗಳ 'ನಗ್ನನೃತ್ಯ' ! ಪ್ರಾಮಾಣಿಕನಾಗಿ ದುಡಿಯುವ ಜನತೆಯ ಹಕ್ಕಿನ ನಿರಾಕರಣೆ.

ಜನತಾ ಪಕ್ಷದ ಮತ್ತು ಕಾಂಗ್ರೆಸ್ (ಐ)ಗಳ ಪ್ರತಿನಿಧಿಗಳಲ್ಲಿ ಅಧಿಕ ಮಂದಿ ಉಳ್ಳುವ ವರ್ಗಗಳಿಗೆ ಸೇರಿದವರು, ಅವರು ಈ ಚುನಾವಣೆಯಲ್ಲಿ ಖರ್ಚು ಮಾಡಿದ ಹಣದ ವೆಚ್ಚ, ಸರಕಾರದ ಯಂತ್ರದ ದುರುಪಯೋಗ ಎಷ್ಟು ನಡೆಯಿತು. ಖುದ್ದಾಗಿ ಶ್ರೀ ರಾಮಕೃಷ್ಣ ಹೆಗ್ಗಡೆಯವರೇ ಯಾವ ಘಾಟಿಯಲ್ಲಿ ಪ್ರಚಾರ ಎಷ್ಟೆಷ್ಟು ಮಾಡಿದರು, ಎಲ್ಲೆಲ್ಲಿ "ಕಲ್ಲುಗಳ"ನ್ನು ಸ್ಥಾಪಿಸಿದರು.. ಪುನ: ಫಲಿತಾಂಶ, ಗ್ರಾಮಾಂತರದಲ್ಲಿ ಸ್ಥಾಪಿತ ಹಿತಾಸಕ್ತಿಗಳ ಅವರಿಗೆ ಕಾಂಗ್ರೆಸ್ಸಾದರೇನು ಆಡಳಿತೆಯ ಸ್ಥಾಪನೆ. ದುಬಾರಿ ಹಣ ಖರ್ಚು ಮಾಡುವ ಕೈಗೆ ಅಧಿಕಾರ ಸ್ವಾಧೀನ!!

ಈ ಬೆಳವಣಿಗೆಗಳ ಆಧಾರದಲ್ಲಿ ಕರ್ನಾಟಕದಲ್ಲಿ "ಮೌಲ್ಯಾಧಾರಿತ ರಾಜಕೀಯಕ್ಕೆ ಕೊನೆಪರದೆ ಎಳೆಯಲಾಗಿದೆ. ಎಂಬ ನಿರ್ಧಾರಕ್ಕೆ ಬರಬಹುದು. ಕಾಂಗ್ರೆಸು (ಐ) ಯ ಜನವಿರೋಧಿ ಬಂಡವಾಳಶಾಹಿ–ಭೂಮಾಲಿಕ ವರ್ಗಗಳ ರಾಜಕೀಯಕ್ಕೆ ಪರ್ಯಾಯ ಧೋರಣೆಯ ಜನಪರ ಧೋರಣೆಯುಳ್ಳ ಆಡಳಿತೆಯ ಭರವಸೆ ಇಲ್ಲದಂತಾಗಿದೆ.

ಜನತೆಗೆ ಹೋರಾಟವಲ್ಲದೆ ಬೇರೆ ದಾರಿಯಿಲ್ಲ.... ಎಡ ಪಕ್ಷಗಳು ಈ ವಿದ್ಯಾಮಾನಗಳ ಆಧಾರದಲ್ಲಿ ತಮ್ಮ ಕೆಲಸ ಕಾರ್ಯಗಳನ್ನು ಸಮಸ್ಯೆಗಳನ್ನು, ಹೋರಾಟಗಳನ್ನು ನಿರ್ಧರಿಸಿ ಕಾರ್ಯೋನ್ಮುಖರಾಗ ಬೇಕಾಗಿದೆ.... ನಿರ್ದಿಷ್ಟ ಪ್ರಶ್ನೆಗಳಮೇಲೆ ದೀರ್ಘವಾಗಿ ಹೋರಾಟಗಳನ್ನು ಸಂಘಟಿಸಬೇಕಾಗಿದೆ. ವರ್ಗ ಹೋರಾಟದ ಮೂಲಕ ಮಾತ್ರ ಸಮಾಜವನ್ನು ಬದಲಿಸುವ ಶಕ್ತಿ ನಿರ್ಮಾಣ ಸಾಧ್ಯವೆಂಬ ಮಾರ್ಕ್ಸ್‌ರವರ ಸಂದೇಶವು ಎಲ್ಲಾ ಚಟುವಟಿಕೆಗಳ ಮಾರ್ಗದರ್ಶನವಾಗಬೇಕಾಗಿದೆ.

ಈ ವಾರ...

ಅಂತರಾಷ್ಟ್ರೀಯ

- ಹತೋಟಿ ಮೀರಿದ ಕೊರತೆ ಎದುರಿಸುತ್ತಿರುವ ಅಮೆರಿಕಾ ಹಾಗೂ ನಿಕಟ ಯುರೋಪಿನ ದೇಶಗಳ ನಡುವೆ ವಾಣಿಜ್ಯಯುದ್ಧ ಡಿ-31
- ಎಲ್.ಟಿ.ಟಿ.ಇ. ಜಾಫ್ನಾದಲ್ಲಿ ಸಮನಾಂತರ ಆಡಳಿತವನ್ನು ಸ್ಥಾಪಿಸಿದ್ದಾರೆ - ಶ್ರೀಲಂಕಾ ಸರಕಾರದಿಂದ ಉರವಲು ಪೂರೈಕೆ ತಡೆ ಭಾರತದ ಆತಂಕ ಜ 1 ರಿಂದ 5
- ಗುಪ್ತ ರಾಜಕೀಯ ಪಕ್ಷ ರಚಿಸಿ ಸರಕಾರದ ವಿರುದ್ಧ ಪಿತೂರಿ ನಡೆಸಲಾಗುತ್ತಿದೆ ಎಂದು ಚೀನೀ ಸರಕಾರ ಜ-2
- ರೇಗನ್‌ರಿಂದ ಅಮೇರಿಕಾಕ್ಕೆ 1.8 ಲಕ್ಷ ಕೋಟಿ ಡಾಲರುಗಳ ಶಸ್ತ್ರಾಸ್ತ್ರ ಬಜೆಟ್. ತಾರಾಯುದ್ಧಕ್ಕೆ ಮತ್ತೆ 200 ಕೋಟಿ ಡಾಲರುಗಳು ಜ-2
- ದಕ್ಷಿಣ ಏಷ್ಯಾದಲ್ಲಿ ಪಾಕಿಸ್ತಾನಕ್ಕೆ ಅಮೇರಿಕಾದ ಅತ್ಯಂತ ದೊಡ್ಡ ಅಂದರೆ 68.4 ಕೋಟಿ ಡಾಲರುಗಳ ನೆರವು. 20 ಕೋಟಿ ಡಾಲರುಗಳು ಶಸ್ತ್ರಾಸ್ತ್ರಗಳಿಗೆ.
- ಸೋವಿಯತ್ ಒಕ್ಕೂಟದಿಂದ ಮಿಗ್-29 ಯುದ್ಧ ವಿಮಾನಗಳ ಮೊದಲ ತಂಡದ ಆಗಮನ ಜ-3

ದೇಶದಲ್ಲಿ

- 1984 ರ ಜೂನ್ 30 ರೊಳಗಾಗಿ ವರದಿ ಸಲ್ಲಿಸಬೇಕಾಗಿದ್ದ ಸರ್ಕಾರಿಯಾ ಆಯೋಗದ ಅವಧಿ ಮತ್ತೊಮ್ಮೆ ಏಪ್ರಿಲ್ 30 ರವರೆಗೆ ವಿಸ್ತರಣೆ ಡಿ–31
- ರಫ್ತು ಹೆಚ್ಚಿಸಲು ಮತ್ತಷ್ಟು ಉದಾರ ಲೈಸೆನ್ಸಿಂಗ್ ಜ-2
- ಮುಸ್ಲಿಂ ಪ್ರಗತಿಪರ ವೇದಿಕೆಯಿಂದ ಗಣತಂತ್ರ ದಿನಾಚರಣೆ ಬಹಿಷ್ಕಾರದ ಖಂಡನೆ ಜ-4
- 'ಇಂದಿರಾ ನಿಷ್ಟ' ರಿಂದ ಹೊಸ ಪಕ್ಷ ಆರಂಭ ಜ-6
- ತ್ರಿಪುರಾ ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಟಿ. ಯು. ಜೆ. ಎಸ್. ಕೂಟಕ್ಕೆ ಭಾರಿ ಪರಾಭವ ಜ-6

ಕರ್ನಾಟಕದಲ್ಲಿ

- ಕೇಂದ್ರ ಸರಕಾರದ ಒಪ್ಪಿಗೆಗೆ ಕಾದಿದ್ದ ಕರ್ನಾಟಕದ 5 ಜನರೇಟರುಗಳಿಗೆ ಅಸ್ತು ಡಿ–31
- 19 ಜಿಲ್ಲಾ ಪರಿಷತ್‌ಗಳ 885 ಸ್ಥಾನಗಳಿಗೆ ಚುನಾವಣೆ ಜ–2
- ಜನತಾಕ್ಕೆ 449 ಸ್ಥಾನಗಳು, 11 ಜಿಲ್ಲೆಗಳಲ್ಲಿ ಬಹುಮತ ಕಾಂಗ್ರೆಸ್‌ಗೆ 395 ಸ್ಥಾನಗಳು–4 ಜಿಲ್ಲೆಗಳಲ್ಲಿ ಬಹುಮತ ಜ-3
- ಜಿಲ್ಲಾ ಪರಿಷತ್ ಚುನಾವಣೆಗಳು ಜನತಾ ಎಂ.ಎಲ್.ಎ.ಗಳಿಗೆ ಪಾಠ ಕಲಿಸಿದೆಯೆಂದು ಮುಖ್ಯಮಂತ್ರಿಗಳು ಜ-4
- ರಾಜ್ಯದ ಕಿರಿಯ ವೈದ್ಯರ 21–ದಿನಗಳ ಮುಷ್ಕರ ಅಂತ್ಯ ಜ-5

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Editorial and Managerial Office : L-56, K. V. Temple Street,
Sultanpet B-53 Phone : 75331
Editor P. Ramachandra Rao
Managing Editor : N. K. Upadhyaya